# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 280 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 16.05.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 280 • PRGI No:KARKAN/2023/88055 • VIJAYANAGARA • 16.05.2025 • Friday • Page:04 • Rs:2



1,30,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper

ನಿಮ್ಮ ಜಾಹೀರಾತು ಈಗ ಜಗದಗಲ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಮುದ್ರಣ ಜಾಹೀರಾತಿಗೆ ಪಾವತಿಸಿ ಪಡೆಯಿರಿ ಡಿಜಿಟಲ್ ಆವೃತ್ತಿ ಉಚಿತ*
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ
ಹಂಪಿ ಟೈಮ್ಸ್ ಇ-ಪೇಪರ್
*conditions apply
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ಹಂಪಿ ಟೈಮ್ಸ್
SCAN TO WATCH
SSLC ಹೈಸ್ಕೋರ್ ಸೀಕ್ರೆಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


## ನಿನಗೆ ನೀನೇ ಬೆಳಕು

ನಿಮಗೆ ಸೂರ್ಯನಂತೆ ಮಿಂಚುವ ಆಸೆ ಇದ್ದರೆ, ಮೊದಲು ಸೂರ್ಯನಂತೆ ಉರಿಯುವುದನ್ನು ಕಲಿಯಿರಿ
– ಎ.ಪಿ.ಜೆ.ಅಬ್ದುಲ್ ಕಲಾಂ

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ

ಇಂದು ನೀನು ನನಗೆ
ಆಸರೆ ಗೋಲು ನೀಡಿದರೆ.
ಮುಂದೆ ನಾನು ನಿನಗೆ
ಊರುಗೋಲು ಕೊಡುವೆ




Classifide / Display ADS
Contact:
94486 33038


# ಧಾರವಾಡ ಹೈಕೋರ್ಟ್‌ನಿಂದ ಮಧ್ಯಂತರ ತಡೆಯಾಜ್ಞೆ ಆದೇಶ
# ಪಿಡಿಐಟಿ ಅಧ್ಯಕ್ಷರಾಗಿ ಮುಂದುವರೆದ ಬಾದಾಮಿ



**■ ಹಂಪಿ ಟೈಮ್ಸ್ ಹೊಸಪೇಟೆ**

ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯರಾದ ಕರಿಬಸವರಾಜ್ ಬಾದಾಮಿ ಮತ್ತು ದರೂರು ಶಾಂತನ ಗೌಡ ಅವರನ್ನು ವೀ.ವಿ.ಸಂಘದ ವಿವಿಧ ಶಾಲಾ–ಕಾಲೇಜುಗಳ ಆಡಳಿತ ಮಂಡಳಿ ಅಧ್ಯಕ್ಷ ಸ್ಥಾನದಿಂದ ವಿಮುಕ್ತ ಗೊಳಿಸಿ ವಿವಿ ಸಂಘದ ಏ.10ರಂದು ನಡೆದ ಕಾರ್ಯಕಾರಿ ಮಂಡಳಿ ಸಭೆಯಲ್ಲಿನ ಕ್ರಮ 17ಕ್ಕೆ ಧಾರವಾಡ ಹೈಕೋರ್ಟ್ ಪೀಠ ಮಧ್ಯಂತರ ತಡೆಯಾಜ್ಞೆ ಆದೇಶ ನೀಡಿದೆ. ಈ ಆದೇಶದಿಂದಾಗಿ ಇಬ್ಬರನ್ನು ಕಾಲೇಜುಗಳ ಆಡಳಿತ ಮಂಡಳಿಗಳ ಅಧ್ಯಕ್ಷ ಸ್ಥಾನದಿಂದ ವಿಮುಕ್ತಿಗೊಳಿಸಿರುವ ಸಂಘದ ಆದೇಶ ರದ್ದಾಗುವ ಜೊತೆಗೆ ಅವರು ಈ ಹಿಂದಿನ ಶಾಲಾ–ಕಾಲೇಜುಗಳ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ.

ಕರಿಬಸವರಾಜ್ ಬಾದಾಮಿ ಅವರು ಹೊಸಪೇಟೆಯ ಪ್ರೌಢದೇವರಾಯ ಇಂಜಿನೀಯರಿಂಗ್ ತಾಂತ್ರಿಕ ಮಹಾವಿದ್ಯಾಲಯ, ಷ ಭವರಲಾಲ್ ಬಿ.ಇಡಿ ಕಾಲೇಜು, ವೀ.ವಿ. ಸಂಘದ ಪದವಿ ಕಾಲೇಜ್ ಪಿಡಿಐಟಿ ಕ್ಯಾಂಪಸ್, ಹಗರಿಬೊಮ್ಮನಹಳ್ಳಿ ವೀ.ವಿ ಸಂಘದ ಕಿಂಡರ್ ಗಾರ್ಡ್‌ನ್ ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷರಾಗಿದ್ದರು. ದರೂರು ಶಾಂತನ ಗೌಡ ಅವರು ಬಳ್ಳಾರಿಯ ವೀರಶೈವ ಮಹಾವಿದ್ಯಾಲಯ ಮತ್ತು ಇಂಡಿಪೆಂಡೆಂಟ್ ಪಿಯು ಕಾಲೇಜಿನ ಆಡಳಿತಮಂಡಳಿಯ ಅಧ್ಯಕ್ಷರಾಗಿದ್ದರು.

ಆದರೆ ಏ.10. 2025ರಂದು ನಡೆದ ವೀ.ವಿ. ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಯಾವುದೇ ನೋಟೀಸ್ ನೀಡದೆ, ಗಮನಕ್ಕೆ ಇಲ್ಲದೆ, ಏಕ ಪಕ್ಷೀಯವಾಗಿ ಪೂರ್ವಗ್ರಹ ಪೀಡಿತರಾಗಿ ನಮ್ಮಿಬ್ಬರನ್ನು ವಿವಿಧ ಕಾಲೇಜು ಮಂಡಳಿಗಳ ಅಧ್ಯಕ್ಷ ಸ್ಥಾನದಿಂದ ವಿಮುಕ್ತಗೊಳಿಸಿದ್ದರು ಎಂದು ಸಮಿತಿಯ ಸದಸ್ಯರಾದ ಕರಿಬಸವರಾಜ್ ಬಾದಾಮಿ, ದರೂರು ಶಾಂತನಗೌಡ ವೀ.ವಿ. ಸಂಘದ ಕಾರ್ಯಕಾರಿ ಮಂಡಳಿಯ ನಿರ್ಧಾರ ಪ್ರಶ್ನಿಸಿ ಧಾರವಾಡ ಹೈಕೋರ್ಟ್ ಪೀಠಕ್ಕೆ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಪರಿಶೀಲಿಸಿದ ಧಾರವಾಡ ಹೈಕೋರ್ಟ್ ಪೀಠವು ವೀ.ವಿ. ಸಂಘದ ಕಾರ್ಯಕಾರಿ ಮಂಡಳಿಯ ನಿರ್ಧಾರವು ಮೇಲ್ನೋಟಕ್ಕೆ ನಿಯಮ ಪಾಲನೆ ಮಾಡಿಲ್ಲ ಎಂಬುದು ಗೊತ್ತಾಗುತ್ತದೆ ಎಂದು ತಿಳಿಸುವ ಮೂಲಕ ಕಾರ್ಯಕಾರಿ ಮಂಡಳಿಯ ಕ್ರಮ ಸಂಖ್ಯೆ 17ನೇ ನಿರ್ಧಾರಕ್ಕೆ ಮುಂದಿನ ಆದೇಶದವರೆಗೆ ಮಧ್ಯಂತರ ತಡೆಯಾಜ್ಞೆ ನೀಡುವ ಮೂಲಕ ಇಬ್ಬರನ್ನು ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷಸ್ಥಾನ ಮುಂದುವರಿಸುವಂತೆ ಸೂಚಿಸುವ ಜೊತೆಗೆ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ ಎಂದು ಕರಿಬಸವರಾಜ ಬಾದಾಮಿ ತಿಳಿಸಿದರು.

# ಇಂದು ವಿಜಯನಗರ ಜಿಲ್ಲೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ ಆಗಮನ

**■ ಹಂಪಿ ಟೈಮ್ಸ್ ಹೊಸಪೇಟೆ**






ನಗರದಲ್ಲಿ ಮೇ.20 ರಂದು ಜರುಗಲಿರುವ ಸಾಧನಾ ಸಮಾವೇಶ ಸಮಾರಂಭದ ಪೂರ್ವ ಸಿದ್ಧತೆ ಪರಿಶೀಲಿಸಲು ಮೇ.16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೊಸಪೇಟೆಗೆ ಆಗಮಿಸಲಿದ್ದಾರೆ.

ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗಮನ ಹಿನ್ನಲೆಯಲ್ಲಿ ಖುದ್ದಾಗಿ ಮೇ.16 ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಕೊಪ್ಪಳದ ಗಿಣಿಗೇರಾ ವಿಮಾನ ನಿಲ್ದಾಣಕ್ಕೆ ಆಗಮಿಸಿ, ರಸ್ತೆ ಮೂಲಕ ವಾಹನದಲ್ಲಿ ನಗರದ ಡಾ. ಪುನೀತ್ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣಕ್ಕೆ ಬೆ.11:30 ಗಂಟೆಗೆ ಭೇಟಿ ನೀಡಿ ಪೂರ್ವ ಸಿದ್ಧತೆಗಳ ಪರಿಶೀಲಿಸುವರು. 1:30 ಕ್ಕೆ ಕೊಪ್ಪಳದ ಗಿಣಿಗೇರಾ ವಿಮಾನ ನಿಲ್ದಾಣದಿಂದ ಮಂಗಳೂರಿಗೆ ತೆರಳಲಿದ್ದಾರೆ.

**ಉಪಮುಖ್ಯಮಂತ್ರಿ ಅವರ ಪ್ರವಾಸ:** ನಗರದಲ್ಲಿ ಮೇ.20 ರಂದು ಜರುಗಲಿರುವ ಸಾಧನಾ ಸಮಾವೇಶ ಸಮಾರಂಭದ ಪೂರ್ವ ಸಿದ್ದತೆ ಪರಿಶೀಲಿಸಲು ಮೇ 16 ರಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಆಗಮಿಸಲಿದ್ದಾರೆ. ಮೈಸೂರು ನಿಂದ ಜಿಂದಾಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿ, ನಂತರ ರಸ್ತೆ ಮೂಲಕ ನಗರದ ಡಾ. ಪುನೀತ್ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣಕ್ಕೆ ಬೆ.11:00 ಗಂಟೆಗೆ ಭೇಟಿ ನೀಡಿ ಪೂರ್ವ ಸಿದ್ದತೆಗಳ ಕುರಿತು ಚರ್ಚಿಸಲಿದ್ದಾರೆ. ಬಳಿಕ 2:30 ಕ್ಕೆ ಜಿಂದಾಲ್ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ತೆರಳುವರು.

# ರೈಲು ಪುನರಾರಂಭ, ಮೇಲ್ಸೇತುವೆ ನಿರ್ಮಾಣಕ್ಕೆ ಒತ್ತಾಯ



**■ ಹಂಪಿ ಟೈಮ್ಸ್ ಹೊಸಪೇಟೆ**

ಪ್ರವಾಸೋದ್ಯಮ ಹಾಗೂ ವಾಣಿಜ್ಯ ಚಟುವಟಿಕೆಗಳ ಉತ್ತೇಜನಕ್ಕೆ ಹೊಸಪೇಟೆ–ಮಂಗಳೂರು ನೇರ ರೈಲು ಸಂಚಾರ ಹಾಗೂ ನಗರದಲ್ಲಿ ಮೇಲ್ಸೇತುವೆಗಳ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣಗೆ ವಿಜಯನಗರ ರೈಲ್ವೆ ಬಳಕೆದಾರರ ಸಂಘ ಗುರುವಾವ ಮನವಿ ಸಲ್ಲಿಸಿತು.

ಹೊಸಪೇಟೆ, ಬಳ್ಳಾರಿ, ಕೊಟ್ಟೂರು ಮಾರ್ಗವಾಗಿ ಮಂಗಳೂರಿಗೆ ನೇರ ರೈಲು ಸಂಪರ್ಕ ಕಲ್ಪಿಸಬೇಕು ಇದರಿಂದ ಹಂಪಿ, ಬೇಲೂರು, ಹಳೇ ಬೀಡು, ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಶ್ರವಣಬೆಳಗೊಳ, ಮಣಿಪಾಲ, ಉಡುಪಿ, ಮಂಗಳೂರಿಗೆ ಸಂಪರ್ಕ ದೊರೆಯುತ್ತದೆ. ಕರಾವಳಿ ಮಲೆನಾಡು ಜಿಲ್ಲೆಗಳಿಂದ ಕಲ್ಯಾಣ ಕರ್ನಾಟಕ ಜಿಲ್ಲೆಗಳ ನಡುವೆ ವ್ಯಾಪಾರ ವಾಣಿಜ್ಯ ವಹಿವಾಟುಗಳು ವೃದ್ದಿಯಾಗುತ್ತವೆ. ಪ್ರವಾಸೋದ್ಯಮಕ್ಕೂ ಅನುಕೂಲವಾಗಲಿದೆ ಎಂದು ವಿವರಿಸಿದರು.

**ಪುನರಾರಂಭಿಸಿ :** ಮಹಾಕುಂಬ ಮೇಳದ ನಿಮಿತ್ತ ರದ್ದಾಗಿರುವ ಗಾಡಿ ಸಂಖ್ಯೆ : 07335/07336 ಬೆಳಗಾವಿ–ಹೊಸಪೇಟೆ–ಹೈದ್ರಾಬಾದ್–ಮಣಗೂರು ರೈಲನ್ನು ಕೂಡಲೇ >>4



ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಹೊಸಪೇಟೆಯಲ್ಲಿ ಇಂದಿರಾಗಾಂಧಿ ಕಟ್ಟೆಯಂದೇ ಹೆಸರಾಗಿರುವ ಕಟ್ಟಡದ ಮೇಲೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಪುತ್ಥಳಿ ಸ್ಥಾಪನೆಗೆ ಸಿದ್ಧತೆ ನಡೆದಿದ್ದು, ಮೇ 20ರಂದು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಉದ್ಘಾಟಿಸಲಿದ್ದಾರೆ. ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕ ನಾಗೇಂದ್ರ ಇತರರಿದ್ದರು.

# ಸೈನಿಕ ತೆರಿಗೆ ಜಾರಿಗೆ ಆಗ್ರಹಿಸಿ ದೇಶ ರಕ್ಷಣೆ ಯಾತ್ರೆ

## ಯುವ ಲೇಖಕ ಧನಂಜಯ ದಶಕಗಳಿಂದ ಒಬ್ಬಂಟಿ ಹೋರಾಟ | 2ನೇ ಹಂತದಲ್ಲಿ ರಾಜ್ಯಾದ್ಯಾಂತ ಹೋರಾಟ ಆರಂಭ

**■ ಹಂಪಿ ಟೈಮ್ಸ್ ಕೂಡ್ಲಿಗಿ**

ದೇಶಾದ್ಯಂತ ಪ್ರತ್ಯೇಕವಾಗಿ ಸೈನಿಕ ತೆರಿಗೆ ಜಾರಿಗೆ ತರಬೇಕು ಎಂದು ಆಗ್ರಹಿಸಿ ಯುವ ಲೇಖಕರೊಬ್ಬರು ತಾಲ್ಲೂಕಿನ ಲೋಕಿಕೆರೆಯಲ್ಲಿ ತಮ್ಮ ನಿವಾಸದಿಂದ ರಾಜ್ಯದ್ಯಂತ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಒಬ್ಬಂಟಿಯಾಗಿ ಅನಿರ್ದಿಷ್ಟಾವಧಿ ದೇಶ ರಕ್ಷಣೆ ಯಾತ್ರೆ ಆರಂಭಿಸಿದ್ದಾರೆ. ಸೈನಿಕ ತೆರಿಗೆ ಜಾರಿಗಾಗಿ ದೇಶ ರಕ್ಷಣೆ ಯಾತ್ರೆ ನಡೆಸುತ್ತಿರುವ ಯುವ ಲೇಖಕ ಧನಂಜಯ ಮಾಧ್ಯಮಗಳೊಂದಿಗೆ ಮಾತನಾಡಿ, ಹಗಲು–ರಾತ್ರಿ ತನ್ನ ಕುಟುಂಬವನ್ನು ತೊರೆದು ದೇಶದ ಗಡಿಯಲ್ಲಿ ಚಳಿ, ಗಾಳಿ, ಬಿಸಿಲು ಲೆಕ್ಕಿಸದೆ ದೇಶ ರಕ್ಷಣೆ ಮಾಡುವ ಸೈನಿಕರಿಗೆ ಕೇಂದ್ರ ಸರ್ಕಾರ ಪ್ರತ್ಯೇಕವಾಗಿ ಸೈನಿಕ ತೆರಿಗೆ ಕಾಯ್ದೆಯನ್ನು ಜಾರಿಗೆ ತರಬೇಕು. ಜಮೀನು, ಮನೆ ಸೇರಿದಂತೆ ಅನೇಕ ರೀತಿಯ ತೆರಿಗೆಯನ್ನು ಈಗಾಗಲೇ ಜನಸಾಮಾನ್ಯರಿಗೆ ಸರ್ಕಾರ ವಿಧಿಸುತ್ತಿದೆ. ಅದೇ ರೀತಿಯಲ್ಲಿ ಸೈನಿಕ ತೆರಿಗೆ ವಿಧಿಸಬೇಕು. ಸೈನಿಕರು ದೇಶ ಕಾಯುವ ರಕ್ಷಕ ದೇಶದ ಗಡಿ ಸುಭದ್ರ ವಾಗಿದ್ದರೆ ಮಾತ್ರ ದೇಶದಲ್ಲಿ ಪ್ರತಿಯೊಂದು ಮನೆಯೂ ಸುರಕ್ಷಿತವಾಗಿರಲು ಸಾಧ್ಯ. ನಮ್ಮ ಅಖಂಡ ಭಾರತ ದೇಶದ ಗಡಿಯಲ್ಲಿ ಹಗಲಿರುಳೆನ್ನದೆ




ಬೆಟ್ಟ, ಕಾಡು, ನದಿ, ಸಮುದ್ರದಂತಹ ಪ್ರದೇಶಗಳಲ್ಲಿ ಚಳಿ, ಮಳೆ, ಗಾಳಿ, ಹಿಮಾ, ಬಿಸಿಲು ಯಾವುದನ್ನು ಲೆಕ್ಕಿಸದೆ ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಹಸಿವು ಬಾಯಾರಿಕೆಗಳ ಗಮನವಿಲ್ಲದೆ ಶತ್ರುಗಳ ಬದುಕಿನ ಗುಂಡಿಗೆ ಗುಂಡಿಗೆಕೊಟ್ಟು ನಮ್ಮನ್ನೆಲ್ಲ ಕಾಯುತ್ತಿರುವ ಆ ಮಹಾದೇವ ಸ್ವರೂಪಿ ಯೋಧರಿಗೆ ಅನಂತ ಕೃತಜ್ಞಗಳನ್ನು ಪ್ರತಿಯೊಬ್ಬ ಭಾರತೀಯನು ಪ್ರತಿನಿತ್ಯ ಸಲ್ಲಿಸಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಸ್ತುತ ಅದ್ಭುತ ಜಾತಿಯಲ್ಲಿರುವಂತ ತೆರಿಗೆಗಳ ಕಾಲ ಜೊತೆಗೆ ಸೈನಿಕ ಕರ ಎಂಬ ಮತ್ತೊಂದು ಕಾಲಂನ್ನು ಹೊಸದಾಗಿ ಸೇರಿಸಿಕೊಂಡು ಎಲ್ಲಾ ತೆರಿಗೆಗಳನ್ನು ವಸೂಲಿ ಮಾಡುವಾಗ ಇದನ್ನು ಸಹ ಪ್ರತಿ ವರ್ಷವೂ ಪ್ರತಿಯೊಂದು ಕುಟುಂಬದಿಂದ ಇಂತಿಷ್ಟು ರೂಪಾಯಿ ನಿಗದಿ ಪಡಿಸಿ ವಸಲಿ ಮಾಡಬೇಕು. ಹಬ್ಬ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ಮಾಡಲು ಪೊಲೀಸ್ ಠಾಣೆಗಳಲ್ಲಿ ಅನುಮತಿ ಪಡೆಯಲು ಬರುವವರಿಗೆ ಸೈನಿಕ ತೆರಿಗೆ ವಿಧಿಸಬೇಕು. ಇದರಿಂದಾಗಿ ಪ್ರತಿದಿನ ಕೋಟ್ಯಂತರ ರೂಪಾಯಿ ತೆರಿಗೆ ಸಂಗ್ರಹವಾಗುತ್ತದೆ. ಹೀಗೆ ಸಂಗ್ರಹವಾದ ಹಣವನ್ನು ತುರ್ತು ಸಂದರ್ಭದಲ್ಲಿ ಹಾಗೂ ವಿಪತ್ತು ಮತ್ತು ಸೈನಿಕರಿಗೆ ಮಾತ್ರ ಬಳಸಬೇಕು. ಈ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಮನಹರಿಸಬೇಕು ಎಂದರು.

**2016 ರಿಂದ ಸತ್ಯಾಗ್ರಹ ಯಾತ್ರೆ ಆರಂಭ:**

ಪ್ರತ್ಯೇಕ ಕಾನೂನುಗಳನ್ನು ದೇಶವ್ಯಾಧಿ ಜಾರಿಗೊಳಿಸ ಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮೊದಲನೇ ಹಂತದಲ್ಲಿ 2016ರಲ್ಲಿ ಹೋರಾಟ ಮಾಡುವ ಉದ್ದೇಶದಿಂದ ಆರಂಭಿಸಿದೆ. ನಂತರ 2017ರಲ್ಲಿ ಜನಸಾಮಾನ್ಯರಿಗೆ ಅರ್ಥ ಮಾಡಿಸುವ ಸಲುವಾಗಿ ಕರಪತ್ರಗಳನ್ನು ಹಂಚುವುದರ ಮೂಲಕ ಅವರ ಒಪ್ಪಿಗೆಯ ಸಹಿ ಸಂಗ್ರಹಗಳನ್ನು ಪ್ರಧಾನ ಮಂತ್ರಿಗಳಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಕಳಿಸಲಾಗಿತ್ತು. 2021 ರಂದ ಮೊದಲ ಬಾರಿಗೆ ಸ್ವಗ್ರಾಮದಲ್ಲಿ ಲೋಕಿಕೆರೆಯಲ್ಲಿ ಒಂದು ದಿನದ ಧರಣಿಯನ್ನು ನಡೆಸಲಾಯಿತು. ನಂತರ 2022 ರಲ್ಲಿ ಹೊಸಹಳ್ಳಿ ಹೋಬಳಿಯಲ್ಲಿ ಒಂದು ದಿನ ಧರಣಿಯನ್ನು ಪಡಿಸಲಾಗಿದೆ. 2023 ರಲ್ಲಿ ಸೈಕಲ್ ಯಾತ್ರೆಯನ್ನು ಕೈಗೊಂಡು ಸ್ವಗ್ರಾಮ ಲೋಕಿಕೆರೆ ಯಿಂದ ಕೂಡ್ಲಿಗಿ ತಾಲೂಕಿಗೆ ಹೋಗಿ ಹಲ್ಲಿನ ಮಹಾತ್ಮ ಗಾಂಧಿ ಚಿತ್ತಾಬಸ್ಮದಲ್ಲಿ ಒಂದು ದಿನ ಧರಣಿಯನ್ನು ನಡೆಸಲಾಯಿತು, ನಂತರ ಅಲ್ಲಿನ ತಹಶೀಲ್ದಾರ್ ಮುಖಾಂತರ ಪ್ರಧಾನಮಂತ್ರಿಗೆ ಹಾಗೂ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು. ವಿಜಯನಗರ ಜಿಲ್ಲೆಗೆ ತೆರಳಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಒಂದು ದಿನ ಧರಣಿಯನ್ನು ನಡೆಸಿ ಮನವಿ ಸಲ್ಲಿಸಲಾಯಿತು.

**2025 ಮೇ 14ರಂದು, 2ನೇ ಹಂತದ ದೇಶ ರಕ್ಷಣೆ ಯಾತ್ರೆ:** ಸ್ವಗ್ರಾಮ ಲೋಕಿಕೆರೆ ಯಿಂದ ರಾಜ್ಯದ್ಯಂತ ಜಿಲ್ಲಾ ಹಾಗೂ ತಾಲೂಕ್ ಕೇಂದ್ರಗಳಲ್ಲಿ ಸಂಚರಿಸಿ ಒಬ್ಬಂಟಿಯಾಗಿ ಅನಿರ್ದಿಷ್ಟಾವಧಿ ದೇಶ ರಕ್ಷಣೆ ಯಾತ್ರೆ ಇಂದಿನಿಂದ ಆರಂಭಿಸಿದ್ದೇನೆ ಎಂದರು.

# ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪಿಯು ಕಾಲೇಜುಗಳಲ್ಲಿ ಉಚಿತ ಪ್ರವೇಶ ಅರ್ಜಿ ಅಹ್ವಾನ

## ಅರ್ಜಿ ಸಲ್ಲಿಸಲು ಮೇ 20 ರಂದು ಕೊನೆಯ ದಿನ


**■ ಹಂಪಿ ಟೈಮ್ಸ್ ಹೊಸಪೇಟೆ**

ಸಮಾಜ ಕಲ್ಯಾಣ ಇಲಾಖೆಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಜಿಲ್ಲಾ ವ್ಯಾಪ್ತಿಯ ತಿಮ್ಮಲಾಪುರ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪಿಯು ಕಾಲೇಜು, ಹಲುವಾಗಲು ಅಟಲ್ ಬಿಹಾರಿ ವಾಜಿಪೇಯಿ ವಿಜ್ಞಾನ ಪದವಿ ಪೂರ್ವ ಕಾಲೇಜು, ಕಂದಗಲ್ಲು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜುಗಳಲ್ಲಿ ಎಸ್ಸೆಸ್ಸೆಲ್ಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾತಿಗಳಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಸಮನ್ವಯ ಅಧಿಕಾರಿ ತಿಳಿಸಿದ್ದಾರೆ.

ವಸತಿ ಕಾಲೇಜಿನಲ್ಲಿ ಆಯ್ಕೆಯನ್ನು ಎಸ್ಸೆಸ್ಸೆಲ್ಸಿ ಮೆರಿಟ್ ಹಾಗೂ ಮೀಸಲಾತಿ ಅನ್ವಯ ಮಾಡಲಾಗುವುದು. ಕ್ರೈಸ್ ವಸತಿ ಶಾಲೆಗಳಲ್ಲಿ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಹಾಗೂ ಇತರ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಮೀಸಲಾತಿಯನ್ನು ಒಳಗೊಂಡಿದೆ. ಸ್ಥಳೀಯ ಜಿಲ್ಲಾ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಹಾಗೂ ಇತರೆ ಜಿಲ್ಲಾ ವಿದ್ಯಾರ್ಥಿಗಳಿಗೆ ಶೇ.25 ರಷ್ಟು ಸೀಟುಗಳನ್ನು ಕಾಯ್ದಿರಿಸಲಾಗಿದೆ. ಜಿಲ್ಲೆಯ ಮೂರು ವಸತಿ ವಿಜ್ಞಾನ ಪಿಯು ಕಾಲೇಜುಗಳಲ್ಲಿ ಸುಸಜ್ಜಿತ ಪ್ರಯೋಗಾಲಯ, ಉಚಿತ ಊಟ ಮತ್ತು ವಸತಿ, ಸಮವಸ್ತ್ರ, ಪಠ್ಯಪುಸ್ತಕಗಳು, ಲೇಖನ ಸಾಮಗ್ರಿಗಳು ಸೇರಿದಂತೆ ಸಿಇಟಿ ಹಾಗೂ ನೆಟ್ ಜೆಇಇ ಮತ್ತು ಇತರೆ ವೃತ್ತಿಪರ ಕೋರ್ಸ್ಗಳಿಗೆ ತರಬೇತಿ ನೀಡಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಮೇ.20 ರಂದು ಕೊನೆಯ ದಿನವಾಗಿದೆ. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಅಗತ್ಯ ದಾಖಲೆಗಳೊಂದಿಗೆ ಪ್ರವೇಶ ಬಯಸುವ ವಸತಿ ಕಾಲೇಜುಗಳಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಆಯಾ ವಸತಿ ಕಾಲೇಜುಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

## ಸಮಾಜದಲ್ಲಾದ ಬದಲಾವಣೆಗಳ ಸಾಧಕ ಬಾಧಕಗಳು

■ ಚೇತನ ಭಾರ್ಗವ. ಬೆಂಗಳೂರು



ಕಳೆದ ಅರ್ಧ ಶತಮಾನದಿಂದೀಚೆಗೆ ಮಾನವ ಕುಲದಲ್ಲಿ ಅಭೂತಪೂರ್ವ ಬದಲಾವಣೆಗಳಾಗಿವೆ. ರಾಜ ಮಹಾರಾಜರ ಸಾಮ್ರಾಜ್ಯ ನಶಿಸಿ ಆಧುನಿಕ ಸಮಾಜದ ಆರಂಭ ಹಂತದಲ್ಲೇ ದೇಶ ದೇಶಗಳು ಪೈಪೋಟಿಗಿಳಿದು ಅಭಿವೃದ್ಧಿಯ ಹಂತದಲ್ಲೇ ಎರಡು ಮಹಾಯುದ್ಧಗಳಾಗಿ, ಮುಂಚೂಣಿ ದೇಶಗಳು ಶೀತಲ ಸಮರಕ್ಕಿಳಿದು ಸಮಾಜವಾದ ಬಂಡವಾಳಶಾಹಿತನಕ್ಕೆ ಕಟ್ಟುಬಿದ್ದು ರಾಜಕೀಯ ಅಸ್ಥಿರತೆ ಭಯೋತ್ಪಾದನೆ ಮುಂತಾದ ಹಲವು ಸವಾಲುಗಳನ್ನು ಎದುರಿಸಿಯೂ ಪ್ರಜಾಪ್ರಭುತ್ವ, ವ್ಯಕ್ತಿಸ್ವಾತಂತ್ರ್ಯ, ಲಿಂಗ ಸಮಾನತೆ, ಆಹಾರ ಸ್ವಾವಲಂಬಿತನ, ಅರೋಗ್ಯ ವ್ಯವಸ್ಥೆ, ಸಂಪರ್ಕ ಕ್ರಾಂತಿ, ತಂತ್ರಜ್ಞಾನ ಔನ್ನತ್ಯ ಹೀಗೆ ಹಲವು ವಿಧದಲ್ಲಿ ಮಾನವ ಸಮುದಾಯದ ಉಚ್ರಾಯ ಕಾಲ ಎಂದರೆ ತಪ್ಪಾಗಲಾರದು .ಶತಮಾನಗಳ ಹಿಂದೆ ರಾಜ ಮಹಾರಾಜರಿಗೂ ದುರ್ಲಭವಿದ್ದ ಸೌಲಭ್ಯ ವ್ಯವಸ್ಥೆ ಇಂದು ಜನ ಸಾಮಾನ್ಯರಿಗೂ ಕೈ ಎಟುಕುವಂತಿದೆ. ದೂರ ಸಂಪರ್ಕ ಸೇವೆ, ಅಂತರ್ಜಾಲ, ಸಾಮಾಜಿಕ ಮಾಧ್ಯಮ ಹಣಕಾಸು ವ್ಯವಸ್ಥೆ, ದುಡಿಯುವ ವರ್ಗ ಹೀಗೆ ಹಲವು ಹತ್ತು ಮಜಲಿನಲ್ಲಿ ಸಮಾಜವು ಆರ್ಥಿಕವಾಗಿ ಸಾಮಾಜಿಕವಾಗಿ ಅಭಿವೃದ್ಧಿ ಸಾಧಿಸಿದೆ.

ಆದರೆ ಅತೀ ಸವಲತ್ತುಗಳು ಎಂದಿಗೂ ನೆಮ್ಮದಿ ತರುವಂತದಲ್ಲ. ಈಗಿನ ಸಮಾಜವು ಮೇಲೆ ಹೇಳಿದಂತೆ ಅತೀ ಉನ್ನತ ಸ್ತರದಲ್ಲಿರಬಹುದು, ಆದರೆ ಮಾನಸಿಕವಾಗಿ ದೈಹಿಕವಾಗಿ ತೀರಾ ದುರ್ಬಲವಾಗುತ್ತಿದೆ. ಜನಸಂಖ್ಯೆ ಬೆಳೆದಂತೆ ಸಂಪನ್ಮೂಲಗಳ ಮೇಲೆ ಒತ್ತಡ ಅದರ ಮೇಲೆ ಪೈಪೋಟಿ ಹೆಚ್ಚಾಗುತ್ತಿದೆ. ಕ್ರಮೇಣ ಲಭ್ಯವಿರುವ ಸೇವೆಗಳು ತುಟ್ಟಿಯಾಗುತ್ತಿವೆ. ನಿಸರ್ಗದ ಮೇಲೆ ನಗರೀಕರಣ ಪ್ರದೂಷಣೆ ಅರಣ್ಯ ನಾಶದ ಪರಿಣಾಮದಿಂದ ಪ್ರಾಕೃತಿಕ ವಿಕೋಪ ಹೆಚ್ಚುತ್ತಿದೆ. ಒಂದು ರೀತಿಯ ಕೊಳ್ಳುಬಾಕ ಸಂಸ್ಕೃತಿ ಬೇರೂರಿದೆ, ಇಡೀ ಸಮೂಹವೇ ಸನ್ನಿಗೊಳಗಾದಂತೆ ನಾವು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದೇವೆ. ನಮ್ಮ ಸಮಾಜದ ಆಧಾರ ಬಿಂದುವಾಗಿದ್ದ ಕುಟುಂಬ ವ್ಯವಸ್ಥೆ ಶಿಥಿಲವಾಗುತ್ತಿವೆ. ಕುಟುಂಬಗಳು ಸಣ್ಣದಾಗಿವೆ. ಹಿರಿಯರು ಹಳ್ಳಿಗಳಿಗೆ ಸೀಮಿತವಾಗಿ ಯುವಕರಿಲ್ಲದೆ ಬೀಕೋ ಎನ್ನುತ್ತಿವೆ. ಮದುವೆ ಬಂಧಗಳು ಜನರಿಗೆ ಭಾರವಾಗುತ್ತಿವೆ, ಹಣದಿಂದಲೇ ಎಲ್ಲವನ್ನೂ ಅಳೆಯುವ ನಡೆಸುವ ಮನೋಭಾವದಿಂದ ಮನುಷ್ಯತ್ವ ಮರೆಯಾಗುತ್ತಿದೆ. ಮೊಬೈಲ್ ಕ್ರಾಂತಿ ಮಾನವ ಸಮಾಜಕ್ಕೆ ಮತ್ತೊಂದು ಮಾಯಾ ಪಾಶ ಬೀರಿದೆ. ಕೃತಕ ಬುದ್ಧಿಮತ್ತೆ ಸಮಾಜದ ಎಲ್ಲಾ ಸ್ಥರದಲ್ಲೂ ಕಾಲಿಟ್ಟು ಮಾನವ ಸಮುದಾಯದ ಔಚಿತ್ಯ ಕಳೆಯುವ ಹಂತಕ್ಕೆ ಬಂದಿದೆ

ಆದರೆ ಇನ್ನೂ ಕಾಲ ಮಿಂಚಿಲ್ಲ , ನಾವು ನಮ್ಮ ಮನಸ್ಸನ್ನು ವಿಶಾಲಗೊಳಿಸಿ ಸಂಕುಚಿತ ಬುದ್ಧಿ ಬಿಟ್ಟು ತಂತ್ರಜ್ಞಾನಕ್ಕೆ ಅಡಿಯಾಳಾಗದೆ ಕುವೆಂಪು ಅವರು ಹೇಳಿದಂತೆ ವಿಶ್ವ ಮಾನವ ಪ್ರಜ್ಞೆಯನ್ನು ಸಾಕಾರ ಗೊಳಿಸಿದರೆ ಮಾನವ ಜಾತಿ ಮತ್ತೆ ಸಹಬಾಳ್ವೆಯಿಂದ ನಿಸರ್ಗದಲ್ಲಿ ಬದುಕಬಹುದು. ಇದಲ್ಲದೇ ನಮ್ಮ ಅನಾಚಾರಗಳನ್ನು ಮುಂದುವರೆಸಿದರೆ ನಿಸರ್ಗವು ಕೊಡುವ ಶಿಕ್ಷೆ ಭೀಕರವಾಗಿರುತ್ತದೆ. ಹಾಗಾಗಿ ನಮ್ಮ ಆಸೆಗಳನ್ನು ಮಿತಿಗೊಳಿಸಿ ಮಾನವೀಯತೆಯೇ ಮೂಲವೆಂದು ಅರಿತು ಬಾಳಿದರೆ ಸಾರ್ಥಕತೆ ದೊರಕುತ್ತದೆ.

## ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಸ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮರೆತೇನೆಂದರೆ ಮರೆಯಲಿ ಹ್ಯಾಂಗ ಬಾಲ್ಯದ ಸವಿ ನೆನಪುಗಳು

ಇಂದಿನ ರಜಾದಿನಗಳಲ್ಲಿ ಮನೆಮನೆಗಳಲ್ಲೂ ರಜೆಯ ಮಜ ಸವಿಯುತ್ತಿರುವ ಮಕ್ಕಳು. ಮಕ್ಕಳ ಚೀರಾಟ, ಹಾರಾಟ, ಜಗಳ,ಗದ್ದಲ ಕೋಲಾಹಲಗಳಿಂದ ಕಂಗೆಟ್ಟಿರುವ ಪಾಲಕರು. ಮನೆಯ ಹೊರಗಡೆ ಬಿಸಿಲಿನ ತಾಪವಾದರೆ ಮನೆಯೊಳಗಡೆ ಮಕ್ಕಳ ಪ್ರತಾಪ.ತಾಯಂದಿರು ಕುಕ್ಕರಗಳಾಗಿದ್ದರೆ ಸಿಡಿದು ಹೋಗುತ್ತಿದ್ದರೇನೋ. ಹಿಂದೆ ಹೀಗಿರಲಿಲ್ಲವೇ ಎಂದು ಯೋಚಿಸಿದರೆ ಮನಸ್ಸು ನಮ್ಮ ಬಾಲ್ಯದ ದಿನಗಳತ್ತ ಓಡಿತು.



ನಮಗೆ ಪ್ರತಿವರ್ಷ ಬೇಸಿಗೆಯಲ್ಲಿ ಎರಡು ತಿಂಗಳ ದೀರ್ಘಾವಧಿಯ ರಜೆ ಮತ್ತು ದಸರೆಯಲ್ಲಿ 15 ರಿಂದ 30 ದಿನಗಳ ಅಲ್ಪಾವಧಿ ರಜೆ ಇರುತ್ತಿತ್ತು. ಹಿಂದೆ ಅವಿಭಕ್ತ ಕುಟುಂಬಗಳು ಇದ್ದು ರಜೆ ಬಿಟ್ಟೊಡನೆ ನಾವು ಮಕ್ಕಳು ಅಜ್ಜನ ಮನೆಗೆ,ಮಾವನ ಮನೆ, ಚಿಕ್ಕಮ್ಮ ದೊಡ್ಡಮ್ಮರ ಮನೆಗೆ, ಸೋದರತ್ತೆಯ ಮನೆಗೆ ರಜೆಯ ದಿನಗಳನ್ನು ಕಳೆಯಲು ಹೋಗುತ್ತಿದ್ದೆವು. ಹಳ್ಳಿಯ ವಿಶಾಲವಾದ ಬಂಕದ ಮನೆಗಳು, ಹಿತ್ತಲಲ್ಲಿರುವ ದೊಡ್ಡ ದೊಡ್ಡ ಕಟ್ಟೆಗಳು, ಊರ ಮುಂದಿನ ಹೊಳೆ-ಹಳ್ಳಗಳು, ತೋಟಗಳು, ಹೊಲಗದ್ದೆಗಳು, ತೋಪುಗಳು, ದೇವಸ್ಥಾನದ ಆವರಣಗಳು, ಒಂದೇ ಎರಡೇ ನಮಗೆ ಆಟವಾಡಲು. ಬೆಳಿಗ್ಗೆ ಎದ್ದು ಮುಖಮಾರ್ಜನ ಮಾಡಿ ಚಹ ಇಲ್ಲವೇ ಹಾಲನ್ನು ಕುಡಿದು ಟವಲನ್ನು ಸುತ್ತಿ ಕೈಯಲ್ಲಿ ಹಿಡಿದು ಹಿರಿಯರ ಮೇಲುಸ್ತುವಾರಿಯಲ್ಲಿ ಬಾವಿಗೆ ಈಜಲು ತೆರಳುವುದು. ಒಂದೆರಡು ಗಂಟೆಗಳ ಕಾಲ ಈಜು ಮೋಜು ಎಲ್ಲವೂ ಒಟ್ಟಿಗೆ ನಡೆದು ನಂತರ ಬಾವಿಯಿಂದ ಹೊರಗೆ ಬಂದರೆ ಕೈ, ಕಾಲುಗಳ ಬೆರಳುಗಳು ನೀರಿನ ಹೊಡೆತಕ್ಕೆ ಮುದುರಿ ಗಗ್ಗರಿಗಟ್ಟುತ್ತಿದ್ದವು. ನಂತರ ಮನೆಗೆ ಬಂದು ಮತ್ತೊಮ್ಮೆ ಸ್ನಾನ ಮಾಡಿ ತಿಂಡಿ ತಿಂದು

ವಾರಿಗೆಯ ಮಕ್ಕಳೊಡನೆ ಬೀದಿಗಿಳಿದರಾಯಿತು. ಗೋಲಿ, ಮರಕೋತಿಯಾಟ, ಸರಬಡಿಗೆಯಾಟ, ಕಣ್ಣ ಮುಚ್ಚಾಲೆ ಹೆಣ್ಣುಮಕ್ಕಳಾದರೆ ಕುಂಟೆಬಿಲ್ಲೆ ಆಣೆಕಲ್ಲು, ಗಜ್ಜುಗ, ಬಳೆ ಚೂರಿನ ಆಟ ಹೀಗೆ ಹತ್ತು ಹಲವು ಆಟಗಳನ್ನು ಆಡಿ ಮನೆಯವರ ಕೂಗಿಗೆ ಓಗೊಟ್ಟು ಮನೆಗೆ ಬಂದು ಕೈ ಕಾಲು ಮುಖ ತೊಳೆದು ಊಟ ಮಾಡುವುದು. ಹಾಗೆ ಸುಮ್ಮನೆ ಊಟ ಮಾಡುವುದು ಕೂಡ ಮತ್ತೆ ಆಟಕ್ಕೆ ಕಳುಹಿಸಲಿ ಎಂಬ ಬಯಕೆಯಿಂದಲೇ. ಆದರೆ ಹಿರಿಯರು ಸೂರ್ಯನ ಬಿಸಿಲು ಸರಿಯುವವರೆಗೆ ಮನೆಯ ಒಳಗಡೆ ಆಟವಾಡಿಕೊಳ್ಳಬೇಕೆಂದು ಕಟ್ಟಪ್ಪಣೆ ಮಾಡುತ್ತಿದ್ದರು. ಬಿಸಿಲಿನ ಬೇಗೆಯ ನೆಪದಲ್ಲಿ ದೊಡ್ಡವರೆಲ್ಲ ವಿಶ್ರಾಂತಿ ಪಡೆಯಲು ಕೋಣೆ, ಪಡಸಾಲೆಗಳನ್ನು ಸೇರಿದರೆ ಮಕ್ಕಳು ಮನೆಯ ಹಿತ್ತಲಿನ ಕಟ್ಟೆಯ ಮೇಲೆ ಮತ್ತೆ ಜಮಾವಣೆಯಾಗುತ್ತಿದ್ದರು. ನಿದ್ದೆ ಬಾರದ ಅಜ್ಜ ಅಜ್ಜಿ ಈ ಮಕ್ಕಳೊಂದಿಗೆ ಸೇರಿ ಚೌಕಾಬಾರ, ಕವಡೆ,ಹುಲಿಮನೆಗಳನ್ನು ಸೀಮೆಸುಣ್ಣದ ಪೆನ್ಸಿಲಿನಿಂದ ಬರೆದು ಆಟವಾಡುತ್ತಿದ್ದರು. ಕೊಂಚ ದೊಡ್ಡವರಾದ ನಂತರ ಚೆಸ್, ಕೇರಂ ಬೋರ್ಡ್, ಹಾವು ಏಣಿ ಆಟ, ಲುಡೋ, ರಾಜಾ, ರಾಣಿ, ಪೊಲೀಸ್, ಕಳ್ಳ ಮುಂತಾದ ಆಟಗಳಿಗೆ ಬಡ್ತಿ ದೊರೆತದ್ದು ನಿಜ.

ಟಿವಿ, ಮೊಬೈಲ್ಗಳಂತಹ ಯಾವುದೇ ಆಕರ್ಷಣೆಗಳು ನಮಗಿರದ ಕಾಲದಲ್ಲಿ ಪುಸ್ತಕ ನಮಗೆ ಅತ್ಯಂತ ಆತ್ಮೀಯ ಸಂಗಾತಿಯಾಗಿತ್ತು. ಮನೆಯ ಅಟ್ಟದಲ್ಲಿ ಇರುತ್ತಿದ್ದ ಪುಸ್ತಕಗಳನ್ನು ಓರಣವಾಗಿ ಜೋಡಿಸಿಟ್ಟುಕೊಂಡು ಓದಲಾರಂಭಿಸಿದರೆ ಊಟ ನಿದ್ರೆಗಳನ್ನು ಕೂಡ ಮರೆಯುವಂತಹ ದಿನಗಳು. ಚಂದಮಾಮ, ಬಾಲಮಿತ್ರ, ತರಂಗ, ಸುಧಾ, ಪ್ರಜಾ ಮತ, ಮಯೂರ, ಕಸ್ತೂರಿ, ತುಷಾರ ಮಾಸಪತ್ರಿಕೆಗಳ ಮಕ್ಕಳ ಪುಟಗಳಲ್ಲದೆ ಕಥೆ ಕಾದಂಬರಿಗಳನ್ನು ಕೂಡ ಓದುತ್ತಿದ್ದೆವು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಹೊಲಕ್ಕೆ ಹೋದರೆ ಯಾರದ್ದೋ ಹೊಲದ ಮಾವಿನಕಾಯಿ, ಪೇರಲ ಹಣ್ಣು, ಚಿಕ್ಕು ಕಾಯಿಗಳನ್ನು ತಿನ್ನುವ ಬಯಕೆ. ತೆಂಗಿನ ಎಳನೀರನ್ನು ಕುಡಿದು ಹೊಟ್ಟೆ ತುಂಬಿಸಿಕೊಂಡದ್ದು ಉಂಟು. ಮರದಲ್ಲಿ ಸಿಕ್ಕುವ ಹುಣಸೆ ಕಾಯಿ ಆರಿಸಿ ತಂದು ಮನೆಯ ಹಿರಿಯರನ್ನು ಕಾಡಿ ಬೇಡಿ ಉಪ್ಪು ಬೆಲ್ಲ ಜೀರಿಗೆ ಹಾಕಿ ನುಣ್ಣಗೆ ಚಿಗಳಿ ಕುಟ್ಟಿಸಿಕೊಂಡು ತಿನ್ನುವ ಸಂಭ್ರಮ. ನೆಲಗಡಲೆ ಅಥವಾ ಶೇಂಗಾ ಬೀಜ, ನೆನೆ ಹಾಕಿದ ಹುಣಸೆ ಬೀಜಗಳನ್ನು ಹುರಿದು ತಿನ್ನಲು ಒಯ್ಯುತ್ತಿದ್ದುದು ಕೂಡ ವಿಶೇಷವೇ. ಹತ್ತು ಪೈಸೆಗೆ ದೊರೆಯುವ ಕ್ಯಾಂಡಿ, 25 ಪೈಸೆಗೆ ದೊರೆಯುವ ಹಾಲಿನ ಐಸ್ ಕೊಡಿಸಿದರಂತೂ ಸ್ವರ್ಗಕ್ಕೆ ಎರಡೇ ಮೆಟ್ಟಿಲು. ಆದರೆ ಅವು ಕೂಡ ಎಲ್ಲರ ಪಾಲಿಗೆ ದುಬಾರಿ ಹವ್ಯಾಸಗಳು.

ಸಂಜೆ ಮತ್ತೆ ಮನೆಯ ಬಳಿ ಸಾರಿ ಕೈ ಕಾಲು ಮುಖ ತೊಳೆದು ಮನೆಯ ಹಿರಿಯರ ಜೊತೆ ಊರ ಮುಂದಣ ದೇವಸ್ಥಾನಕ್ಕೆ ಹೋಗಿ ದೇವರಿಗೆ ನಮಸ್ಕರಿಸಿ ಹಿರಿಯರು ದೇವಸ್ಥಾನದ ಜಗಲಿಯ ಮೇಲೆ ಕಾಲಕ್ಷೇಪ ಕ್ಕಾಗಿ ಮಾತನಾಡಲು ಕುಳಿತರೆ ದೇವಸ್ಥಾನದ ಆವರಣದಲ್ಲಿ ಮತ್ತೆ ಮಕ್ಕಳ ಕಲರವ. ವಿಶೇಷ ಪೂಜೆಯ ದಿನಗಳಾದರೆ ಪೂಜೆಯ ಪ್ರಸಾದ ವಿನಿಯೋಗ ಮತ್ತು ಪ್ರವಚನ ಕಾರ್ಯಕ್ರಮ. ಈ ಸಮಯದಲ್ಲಿ ಮುಂಜಾನೆಯಿಂದ ಆಡಿ ದಣಿದ ದೇಹಕ್ಕೆ ಪ್ರವಚನಕಾರರ ಮಾತು ಜೋಗುಳದ ಲಾಲಿಯಂತಾಗಿ ಎಷ್ಟೋ ಬಾರಿ ಅಲ್ಲಿಯೇ ಮಲಗಿದ್ದು ಕಾರ್ಯಕ್ರಮ ಮುಗಿದ ನಂತರ ಮನೆಯವರೊಂದಿಗೆ ಮತ್ತೆ ಮನೆಯೆಡೆಗೆ ಪಯಣಿಸಿ ಊಟ ಮಾಡಿ ಮಲಗಿದರೆ ಮತ್ತೆ ಎಚ್ಚರವಾಗುವುದು ಬೆಳಗಾ ಮುಂಜಾನೆ ಹಕ್ಕಿಗಳ ಚಿಲಿಪಿಲಿ ಶಬ್ದ ಕೇಳಿದಾಗಲೇ.

ಒಂದೊಂದು ದಿನ ಮನೆಯಲ್ಲಿ ಅಜ್ಜಿ ಮಕ್ಕಳಿಗೆ ಕೈ ತುತ್ತು ಹಾಕುತ್ತಾ ಕಥೆ ಹೇಳಿದರೆ ಕಂಗಳರಳಿಸಿ ಹೊಟ್ಟೆ ಭಾರವಾಗುವುದರ ಅರಿವು ಕೂಡ ಆಗದಷ್ಟು ಕಥೆಯಲ್ಲಿ ಮುಳುಗಿ ಹೋಗುತ್ತಿದ್ದರು. ಕಥೆ, ಒಗಟು, ಗಾದೆ ಮಾತುಗಳನ್ನು, ಹಾಡಿನ ಬಂಡಿ(ಅಂತಾಕ್ಷರಿ)ಯನ್ನು ಚಲನಚಿತ್ರಗಳ ಹೆಸರು ಹೇಳುವ ಸ್ಪರ್ಧೆ ಹೀಗೆ ಹತ್ತು ಹಲವಾರು ಸ್ಪರ್ಧೆಗಳನ್ನು ನಾವುಗಳೇ ಆಯೋಜಿಸಿ ಆಡುತ್ತಿದ್ದೆವು.

ಇನ್ನು ಕೆಲವೊಮ್ಮೆ ಹಪ್ಪಳ, ಉಪ್ಪಿನಕಾಯಿ, ಸಂಡಿಗೆ ತಯಾರಿಯಲ್ಲಿ ಮನೆಯ ಹಿರಿಯರು ತೊಡಗಿದಾಗ ಅವರಿಗೆ ಗೊತ್ತಿಲ್ಲದಂತೆ ಉಪ್ಪಿನಕಾಯಿಗೆ ಹೆಚ್ಚಿದ ಹೋಳುಗಳನ್ನು ಕದ್ದು ತಂದು ಅದಕ್ಕೆ ಕಾರ ಉಪ್ಪು ಹಚ್ಚಿ ಸವಿಯುವುದು, ಸಂಡಿಗೆ ಹಾಕಿದ ನಂತರ ಉಳಿದ ಗಟ್ಟಿಯಾದ ಸಂಡಿಗೆ ಹಿಟ್ಟನ್ನು ತಿನ್ನುವುದು ಹಪ್ಪಳದ ಹಿಟ್ಟನ್ನು ಹಸಿಯಾಗಿಯೇ ತಿನ್ನುವುದು ಹೆಣ್ಣು ಮಕ್ಕಳಾದರೆ ಹಪ್ಪಳ ಸಂಡಿಗೆಗಳ ತಯಾರಿಯಲ್ಲಿ ಸಂಡಿಗೆ ಹಾಕುವುದು ಹಪ್ಪಳ ಲಟ್ಟಿಸುವುದನ್ನು ಕಲಿಯುತ್ತಿದ್ದರು.

ಇನ್ನು ರಜೆಯ ಸಮಯದಲ್ಲಿ ಮನೆಗಳಲ್ಲಿ ಮದುವೆ ಸಂಭ್ರಮವಿದ್ದರೆ ಆ ಮಾತೇ ಬೇರೆ. ಹಿರಿಯರೊಂದಿಗೆ ಜವಳಿ ಖರೀದಿಯಿಂದ ಹಿಡಿದು ಮನೆಗೆ ಬೇಕಾಗುವ ಎಲ್ಲ ಖರೀದಿ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ, ನಮಗೂ ಬಟ್ಟೆ ಬರೆ ಕೊಡಿಸಿದರೆ ಸಂಭ್ರಮ ಇನ್ನೂ ದುಪ್ಪಟ್ಟಾಗುವುದು. ಸೀಮಂತ ಕಾರ್ಯ, ನಾಮಕರಣ ಜವಳ, ದೈವ ದರ್ಶನ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳು ರಜೆಯ ದಿನಗಳಲ್ಲಿ.

ಬೇಸಿಗೆಯ ದಿನಗಳಲ್ಲಿ ಜಾತ್ರೆಗಳು, ರಥೋತ್ಸವಗಳು ಹೆಚ್ಚಾಗಿ ನಡೆಯುತ್ತವೆ. ರಥೋತ್ಸವದ ದಿನ ಮುಂಜಾನೆ ದೇಗುಲಕ್ಕೆ ನೈವೇದ್ಯವನ್ನು ಅರ್ಪಿಸಿ, ಅಲ್ಲಿಯ ಸಾಮೂಹಿಕ ಭೋಜನದಲ್ಲಿ ಪ್ರಸಾದವನ್ನು ಸ್ವೀಕರಿಸಿ ಮನೆಗೆ ಬರುತ್ತಾರೆ. ಸಂಜೆ ಹೊಸ ಬಟ್ಟೆಗಳನ್ನು ಧರಿಸಿ ರಥೋತ್ಸವಕ್ಕೆ ಹೋಗುತ್ತಿದ್ದೆವು.ಅಲ್ಲಿ ಉತ್ಸವ ಮೂರ್ತಿಯನ್ನು ಹೊತ್ತ ತೇರು ಸಾಗುತ್ತಿದ್ದರೆ ಉತ್ತತ್ತಿ ಬಾಳೆಹಣ್ಣುಗಳನ್ನು ತೇರಿನಲ್ಲಿರುವ ದೇವರ ಉತ್ಸವ ಮೂರ್ತಿಗೆ ಎಸೆದು ಕೈ ಮುಗಿಯಬೇಕು. ಇಲ್ಲಿಯೂ ಮಕ್ಕಳಿಗೆ ಒಂದು ಪೈಪೋಟಿ. ತೇರಿನತ್ತ ಬೀಸಿದ ಉತ್ತತ್ತಿ ಮತ್ತು ಬಾಳೆಹಣ್ಣುಗಳನ್ನು ಯಾರು ಹೆಚ್ಚು ಸಂಪಾದಿಸುತ್ತಾರೆ ಎಂದು!!

ಜಾತ್ರೆಯ ಗಲಾಟೆ ತುಸು ಕರಗಿದ ಮೇಲೆ ಮಿರ್ಚಿ, ಮಂಡಕ್ಕಿ, ಬದನೇಕಾಯಿ ಬೋಂಡಾ ಸವಿಯುವುದು. ತರಹೇವಾರಿ ಸಿಹಿಗಳು, ಬೆಂಡು ಬೆತ್ತಾಸ, ಕಬ್ಬಿನ ಹಾಲು ಐಸ್ ಕ್ರೀಮ್ ಮತ್ತಿತರ ಬಗೆಯ ಬಗೆಯ ದೋಸೆ ಇಡ್ಲಿ ಸಾಲುಗಳು ಗೋಬಿ ಮಂಚೂರಿ ಮತ್ತಿತರ ವಿವಿಧ ಬಗೆಯ ಚೈನಿಸ್ ತಿಂಡಿಗಳ ಪೂರೈಕೆ, ಸಾಲು ಸಾಲುಗಳಲ್ಲಿ ಖರೀದಿಸುತ್ತಿರುವ ಜನಗಳು,

ನಮಗೆ ಇಷ್ಟವಾದ ಆಟದ ಸಾಮಾನುಗಳನ್ನು ಪೀ ಪೀ, ಬಲೂನು, ಗಿರಗಿಟ್ಟಿಗಳನ್ನು ಕೊಂಡು ಹರ್ಷಿಸುವ ನಾವು ಅವುಗಳನ್ನು ತೆಗೆದು ಕೊಂಡು ಮತ್ತೆ ಮರಳಿ ಮನೆಗೆ ಹೊರಟರೆ ಅಂದಿನ ರಥೋತ್ಸವ ಕಾರ್ಯಕ್ರಮ ಸಾಂಗವಾದಂತೆಯೆ ಸರಿ.

ಹೀಗೆ ಯಾವುದೇ ಚಿಂತೆ ಅಡ್ಡಿ ಆತಂಕಗಳಿಲ್ಲದೆ ರಜಾ ದಿನಗಳನ್ನು ಕಳೆದು ನೆನಪಿನ ಬುತ್ತಿಗೆ ಮತ್ತಷ್ಟು ಸವಿ ನೆನಪುಗಳನ್ನು ಸೇರಿಸಿ ಎಲ್ಲರಿಗೂ ಮತ್ತೆ ಮುಂದಿನ ರಜೆಯಲ್ಲಿ ಸಿಗುವ ವಾಗ್ದಾನ ಮಾಡಿ ಊರಿನಡೆಗೆ ಮುಖ ಮಾಡುತ್ತಿದ್ದೆವು. ಎಷ್ಟು ಚಂದ ಬಾಲ್ಯದ ಆ ದಿನಗಳು..... ಮರೆತೇನೆಂದರೆ ಮರೆಯಲಿ ಹ್ಯಾಂಗ. ಎಲ್ಲರೂ ಮರಳಿ ಮತ್ತೆ ಏನನ್ನಾದರೂ ಬಯಸಿದರೆ ಅದು ಅವರ ಬಾಲ್ಯ.....,ಮತ್ತೆ ಮತ್ತೆ ಸವಿಯಬೇಕೆನಿಸುವ ಆ ಬಾಲ್ಯದ ದಿನಗಳನ್ನು ಹಿಂದಿಯ ಪ್ರಸಿದ್ಧ ಕವಿ ಸುಮಿತ್ರಾ ನಂದನ್ ಪಂತ್ ಹೀಗೆ ಹೇಳಿದ್ದಾರೆ

**'ಬಾರ್ ಬಾರ್ ಆತೀ ಹೈ ಮುಜಕೋ**
**ಮಧುರ ಯಾದ ಬಚಪನ್ ತೇರಿ**
**ಗಯಾ ಲೆ ಗಯಾ ತು ಜೀವನ್ ಕೀ**
**ಸಬ ಸೆ ಮಧುರ ಖುಷಿ ಮೇರಿ.......**

## ಸರ್ಕಾರದ ಸಾಧನಾ ಸಮಾವೇಶಕ್ಕೆ ಫಲಾನುಭವಿಗಳ್ನು ಕರೆದೊಯ್ಯಲು ಅಗತ್ಯ ಕ್ರಮವಹಿಸಿ

### ಸಚಿವ ಶಿವರಾಜ ಎಸ್ ತಂಗಡಗಿ ಸೂಚನೆ | ಹೊಸಪೇಟೆಯಲ್ಲಿ ಮೇ 20 ರಂದು 1 ಲಕ್ಷಕ್ಕೂ ಅಧಿಕ ಜನರಿಗೆ ಹಕ್ಕುಪತ್ರ

■ ಹಂಪಿ ಟೈಮ್ಸ್ ಕೊಪ್ಪಳ

ರಾಜ್ಯ ಸರ್ಕಾರವು ಯಶಸ್ವಿಯಾಗಿ ಎರಡು ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ನಡೆಯಲಿರುವ ಸರ್ಕಾರದ ಸಾಧನಾ ಸಮಾವೇಶಕ್ಕೆ ಕೊಪ್ಪಳ ಜಿಲ್ಲೆಯ ಫಲಾನುಭವಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕರೆದೊಯ್ಯಲು ಅಗತ್ಯ ಕ್ರಮ ವಹಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಹೇಳಿದರು.



ಅವರು ಬುಧವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಕರೆದ ವಿಜಯನಗರ ಜಿಲ್ಲೆಯಲ್ಲಿ ನಡೆಯಲಿರುವ ಸರ್ಕಾರದ ಸಾಧನಾ ಸಮಾವೇಶ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಮೇ 20ರಂದು ವಿಜಯನಗರ ಜಿಲ್ಲೆಯಲ್ಲಿ ನಡೆಯುವ ಸಾಧನಾ ಸಮಾವೇಶದಲ್ಲಿ ಕಂದಾಯ ಗ್ರಾಮಗಳು, ಜಂಪ್ ಸರ್ವೇ, ಪೊಡಿ ಮುಕ್ತ ಗ್ರಾಮಗಳ ಸೇರಿದಂತೆ ಇತರೆ ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರಗಳ ವಿತರಣೆ ಮಾಡಲಿದ್ದು, ಈ ಕಾರ್ಯಕ್ರಮಕ್ಕಾಗಿ ಕೊಪ್ಪಳ ಜಿಲ್ಲೆಯ ವಿವಿಧ ತಾಲ್ಲೂಕಿನ ಫಲಾನುಭವಿಗಳನ್ನು ಕರೆದೊಯ್ಯಲು ಸುಸಜ್ಜಿತವಾದ ಬಸ್‌ಗಳ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು ಹಾಗೂ ಫಲಾನುಭವಿಗಳಿಗೆ ಬೆಳಗಿನ ಉಪಹಾರ, ಕುಡಿಯುವ ನೀರು ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಕಾರ್ಯಕ್ರಮದ ನಂತರ ಫಲಾನುಭವಿಗಳನ್ನು ಅವರ ಮೂಲ ಸ್ಥಾನಗಳಿಗೆ ಸುರಕ್ಷಿತವಾಗಿ ತಲುಪಿಸುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ತೀವ್ರ ನಿಗವಹಿಸಬೇಕು. ಇದಕ್ಕಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಮಾತನಾಡಿ, ವಿಜಯನಗರ ಜಿಲ್ಲೆಯಲ್ಲಿ ಜರುಗಲಿರುವ ಸರ್ಕಾರದ ಸಾಧನಾ ಸಮಾವೇಶ ಕ್ಕಾಗಿ ಕೊಪ್ಪಳ ಜಿಲ್ಲೆಯಿಂದ 18,270 ಫಲಾನುಭವಿಗಳನ್ನು ಕರೆದೊಯ್ಯುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ 250 ಮತ್ತು ಶಾಲಾ ವಾಹನಳು ಒಳಗೊಂಡಂತೆ 125 ಖಾಸಗಿ ಬಸ್‌ಗಳು ಸೇರಿ ಒಟ್ಟು 375 ಬಸ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಅಧಿಕಾರಿಗಳೊಂದಿಗೆ ಸಭೆಗಳನ್ನು ಮಾಡಿ, ಅವರಿಗೆ ಮಾಹಿತಿ ನೀಡಲಾಗಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸಾಧನೆಯ ಕನಸು

ಸಾಧನೆಯ ಹಾದಿಯದು ಬಹು
ದೂರವಿಹುದು,
ಕನಸು ಕಾಣುವ ಕಣ್ಣುಗಳದು ತಾ
ನಿದ್ರಿಸಿಹಮ್ಟುಪಿದು,
ಆಸೆ ಭರವಸೆ ನಿರೀಕ್ಷೆ ಗೋಪುರ
ಕಟ್ಟುತಲಿಹುದು,
ಸತತ ಪರಿಶ್ರಮ ಪ್ರಯತ್ನದ ಮಹತ್ವ
ಮರೆತಿಹುದು.
ಅದೃಷ್ಟದ ಬೆನ್ನ ಹತ್ತಿ ಸುಲಭದ ದಾರಿ
ಬೆದಕುತಲಿ,
ಸುಖ ತನ್ನ ಹುಡುಕಿ ಬರಲೆಂದು
ಹಂಬಲಿಸುತಲಿ,
ನೂರು ಕಾರಣವ ಹುಡುಕುತ್ತ ಕಾಲ
ಕಳೆಯುತಲಿ,
ಸಾಧನೆಗೆ ಹೊಸ ಗಳಿಗೆ ಸಮಯ
ಹೊಂದಿಸುತಲಿ.
ಕಾಲ ಸರಿಯಾಗಿಲ್ಲ, ತನ್ನ ಜೊತೆಗಾರು
ನಿಲ್ಲಲಿಲ್ಲ,
ಅದಿಲ್ಲ ಇದಿಲ್ಲ ಎಂಬ ಸಲ್ಲದ
ಚಿಂತೆಯಬಿಡಲಿಲ್ಲ,
ಕಾಲಚಕ್ರವೇ ಸರಿದರೂ ವರುಷಗಳೇ
ಸಾಲಲಿಲ್ಲ,
ಸಾಧನೆಯ ಶಿಖರಕ್ಕೆ ಸರಿಯಾದ ಪಥವು
ಸಿಗಲಿಲ್ಲ.
ವ್ಯರ್ಥವಾಗಿ ಕಳೆದ ದಿನಗಳೇ ಸಾಧನೆ
ಆಯಿತಲ್ಲ,
ಆದರೂ ಸಾಧನೆಯ ಮಹತ್ವಕಾಂಕ್ಷೆಯ
ಬಿಡಲಿಲ್ಲ.
ಮುಸುಗು ಬೀರಿ ಮಲಗುವುದನ್ನು
ತೊರೆಯಲಿಲ್ಲ
ಭಗವಂತನಿಗೆ ಬಯ್ಯುವುದ ತಾನು
ಮರೆಯಲಿಲ್ಲ.

– ಮಮತಾ ಶೃಂಗೇರಿ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

# ಸಾಹಿತ್ಯ ಸಂಸ್ಕೃತಿಗಾಗಿ ದುಡಿಯಬೇಕಿದೆ

## ವಿಶ್ರಾಂತ ಪ್ರಾಧ್ಯಾಪಕ ಡಾ. ಅಮರೇಶ ನುಗಡೋಣಿ ಅಭಿಮತ | ಶೂನ್ಯಸಂಪಾದನೆಗಳು ಮಹಿಳಾ ವಚನಕಾರ್ತಿಯರ ಘನತೆ ಎತ್ತಿಹಿಡಿದಿವೆ

■ ಹಂಪಿ ಟೈಮ್ಸ್ ಹೊಸಪೇಟೆ

ಕೆಳವರ್ಗದ ವಚನಕಾರರಿಂದ ಹೊಸ ದರ್ಶನ ಮಾಡಿಸಲು ಶೂನ್ಯ ಸಂಪಾದನೆಗಳು ಪ್ರಯತ್ನಿಸಿವೆ. ಶೂನ್ಯ ಸಂಪಾದನೆಗಳು ಮಹಿಳಾ ವಚನಕಾರ್ತಿಯರ ಘನತೆಯನ್ನು ಎತ್ತಿಹಿಡಿದಿವೆ ಎಂದು ಹಿರಿಯ ವಿದ್ವಾಂಸರೂ, ವಿಶ್ರಾಂತ ಪ್ರಾಧ್ಯಾಪಕರೂ ಆದ ಡಾ. ಅಮರೇಶ ನುಗಡೋಣಿ ಅವರು ಅಭಿಪ್ರಾಯಪಟ್ಟರು.



ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಗುರುವಾರ ಹಿರಿಯ ವಿದ್ವಾಂಸರಾದ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಜ್ಞಾನ ನಮನ ಕಾರ್ಯಕ್ರಮದಲ್ಲಿ ಶೂನ್ಯಸಂಪಾದನೆ ಅಧ್ಯಯನ ಪರಂಪರೆ ಮತ್ತು ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಅವರ ಕುರಿತು ಜ್ಞಾನಸ್ಮರಣೆ ವಿಶೇಷ ಉಪನ್ಯಾಸದಲ್ಲಿ ನುಗಡೋಣಿ ಅವರು ಮಾತನಾಡಿದರು. ಅನುಭವ ಮಂಟಪದ ಚರ್ಚೆಯಲ್ಲಿ ಸಂದರ್ಭಾನುಸಾರ ಸಂವಾದ ಸ್ವರೂಪದಲ್ಲಿ ವಚನಕಾರರು ಆಡಿದ ಮಾತುಗಳೇ ವಚನಗಳಾಗುತ್ತವೆ. ಶರಣರ ವಚನಗಳನ್ನು ಹೀಗೇ ಓದಿ ಎಂದು ಶಿವಗಣಪ್ರಸಾದಿ ಮಹಾದೇವಯ್ಯನವರು ಹೇಳಿದ್ದಾರೆ. ಶಿವಗಣಪ್ರಸಾದಿ ಅವರು ಕಲ್ಪಿಸಿದ ಶೂನ್ಯಸಂಪಾದನೆಯ ಮಾದರಿಯು ಗ್ರೀಕ್‌ನ ತತ್ತ್ವಜ್ಞಾನಿ ಪ್ಲೇಟೋನ ಮಾದರಿಗೆ ಸಂವಾದಿಯಾಗಿದೆ ಎಂದು ತಜ್ಞರು ಹೇಳಿದ್ದಾರೆ ಎಂದು ನುಗಡೋಣಿ ಅವರು ತಿಳಿಸುತ್ತ, ದುಡಿದು ದಾನ ಮಾಡುವ ಶಕ್ತಿ ಪಡೆಯಿರಿ ಎಂಬ ಬಸವಣ್ಣನವರ ಮಾತನ್ನು ಜಿ.ಎಸ್.ಸಿದ್ಧಲಿಂಗಯ್ಯ ತಮ್ಮ ಶೂನ್ಯ ಸಂಪಾದನೆಯಲ್ಲಿ ನೆನಪಿಸುತ್ತಾರೆ. ಅಕ್ಕಮಹಾದೇವಿಯವರು ಪುರಪ್ರವೇಶಿಸಿದಾಗ ಆಕೆಯನ್ನು ಪರೀಕ್ಷಿಸುವ ಪದ್ಧತಿ ಹೇಗೆ ಆರಂಭವಾಯಿತು ಎಂದು ಸಿದ್ಧಲಿಂಗಯ್ಯನವರು ಪ್ರಶ್ನಿಸುವ ಮೂಲಕ ಒಳಸೂಕ್ಷ್ಮವನ್ನು ತೋರುತ್ತಾರೆ. ಶೂನ್ಯ ಸಂಪಾದನೆಗಳಿಲ್ಲದಿದ್ದರೆ ಶರಣರಿಗೆ ಒಂದು ಕಥನ, ಜೀವನ ಇತಿವೃತ್ತಗಳೇ ಇರುತ್ತಿರಲಿಲ್ಲ. ವಚನಗಳ ತಾತ್ತ್ವಿಕತೆ ಅದರ ದರ್ಶನ ಇಟ್ಟುಕೊಂಡು ಆಸಕ್ತಿ ಮತ್ತು ಜವಾಬ್ದಾರಿಯಿಂದ ಅಧ್ಯಯನ ಮಾಡಿದವರಲ್ಲಿ ಸಿದ್ಧಲಿಂಗಯ್ಯನವರು ಒಬ್ಬರಾಗಿದ್ದಾರೆ. ಸಿದ್ಧಲಿಂಗಯ್ಯ ನವರ ಶೂನ್ಯಸಂಪಾದನೆ ಕೃತಿಯು ನಮ್ಮ ಸಾಂಸ್ಕೃತಿಕ ಮುಖಾಮುಖಿಯಲ್ಲಿ ಬಹಳ ಪ್ರಮುಖವಾದ ಅಧ್ಯಾಯ ವಾಗಿದೆ ಎಂದರು. ಕಳೆದ ಮೂರು-ನಾಲ್ಕು ದಶಕಗಳ ಅವಧಿಯಲ್ಲಿ ಪ್ರಥಮದರ್ಜೆ ಕಾಲೇಜಿನ ಅಧ್ಯಾಪಕರಾಗಿ ಕೆಲಸ ಮಾಡಿದವರು ಸಂಬಳದ ಜೊತೆಗೆ ಜೀವನ ಮಾಡಿದರೇ ವಿನಃ ಸಾಹಿತ್ಯ ಮತ್ತು ಸಂಸ್ಕೃತಿ ಜೊತೆಗೆ ಜೀವನ ಮಾಡಿದವರು ಕಡಿಮೆ ಎಂದು ನುಗಡೋಣಿಯವರು ವಿಷಾದಿಸಿದರು.

ಅಧ್ಯಯನದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಅಧ್ಯಯನ ಮಾಡಲು ವಿಷಯಗಳ ಕೊರತೆಯಿಲ್ಲ. ನಮ್ಮ ವಿದ್ಯಾರ್ಥಿಗಳು ವಿಮರ್ಶಾತ್ಮಕ ನೆಲೆಯನ್ನು ಯಾಕೆ ರೂಢಿಸಿಕೊಳ್ಳಬಾರದು ಎಂದು ಪ್ರಶ್ನಿಸುತ್ತ, ಸಿದ್ಧಲಿಂಗಯ್ಯನವರ ಶೂನ್ಯ ಸಂಪಾದನೆಯ ಗ್ರಂಥವನ್ನು ಸಂಶೋಧನೆ ಎನ್ನಬೇಕೆ ಅಥವಾ ವಿಮರ್ಶೆ ಎನ್ನಬೇಕೆ ಎಂಬ ದ್ವಂದ್ವ ನಿಲುವುಗಳಿವೆ ಎಂದು ಉಪನ್ಯಾಸವನ್ನು ಮುಗಿಸಿದರು.

ಕುಲಪತಿ ಡಾ.ಡಿ.ವಿ. ಪರಮ ಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ವಚನಕಾರರ ವಚನಪರಂಪರೆಯ ಮೂಲಕ ಹಾಗೂ ವಚನಕಾರರು ಪ್ರತಿಪಾದಿಸಿದ ತಾತ್ತ್ವಿಕ ದೃಷ್ಟಿಕೋನಗಳ ಮೂಲಕ ಹೀಗೆ ಎರಡು ರೀತಿಯಲ್ಲಿ ಶೂನ್ಯಸಂಪಾದನೆಗಳನ್ನು ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಸಿದ್ಧಲಿಂಗಯ್ಯನವರು ತಾತ್ತ್ವಿಕ ಪರಂಪರೆಗೆ ಸೇರ್ಪಡೆಯಾಗುವ ವಿದ್ವಾಂಸರಾಗಿದ್ದಾರೆ. ತಾತ್ತ್ವಿಕ ಭಿನ್ನಾಭಿಪ್ರಾಯಗಳೇ ಶೂನ್ಯಸಂಪಾದನೆಗಳ ಮರುಹುಟ್ಟಿಗೆ ಕಾರಣವಾಗಿವೆ. ಇರುವ ವಚನಗಳನ್ನೇ ಇಟ್ಟುಕೊಂಡು ಪ್ರಶ್ನೆಗೆ ಉತ್ತರಕೊಡುವ ಕ್ರಿಯಾಶೀಲ ಕೆಲಸಗಳನ್ನು ಶೂನ್ಯಸಂಪಾದನೆಗಳು ಮಾಡಿವೆ. ವಚನಕಾರರು ಎತ್ತಿದ ತಾತ್ತ್ವಿಕ ಪ್ರಶ್ನೆಗಳಿಗೆ ಉತ್ತರ ಕೊಡುವ ಧೈರ್ಯ ಮಾಡಿದ್ದ ಶೂನ್ಯ ಸಂಪಾದನೆಗಳು ಎಂದು ಕುಲಪತಿಯವರು ತಿಳಿಸುತ್ತ, ಸಿದ್ಧಲಿಂಗಯ್ಯನವರು ನಲವತ್ತು ವರ್ಷಗಳ ಕಾಲ ಶೂನ್ಯ ಸಂಪಾದನೆಯೊಂದಿಗೆ ಕಾಲ ಕಳೆದಿದ್ದಾರೆ. ಛಂದಸ್ಸಿನ ಪಾಠವನ್ನು ಅವರು ಸರಾಗವಾಗಿ ಮಾಡುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳಿಗೆ ಒಂದು ತಾತ್ತ್ವಿಕ ಚೌಕಟ್ಟನ್ನು ಸಿದ್ಧಲಿಂಗಯ್ಯನವರು ಹಾಕಿಕೊಟ್ಟಿದ್ದಾರೆ ಎಂದು ಸ್ಮರಿಸಿದರು.

ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅವರು ಪ್ರಾಸ್ತಾವಿಕ ಮಾತನಾಡಿ,ಇದೇ ತಿಂಗಳ 7ನೇ ತಾರೀಕಿನಂದು ನಿಧನರಾದ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಅವರ ಸಾಂಸ್ಕೃತಿಕ ಕೊಡುಗೆಯ ನೆನಪಿಗಾಗಿ ಅವರ ಜ್ಞಾನಸ್ಮರಣೆಯ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಇವರ ಕೃತಿಗಳನ್ನು ವಿಭಾಗದಲ್ಲಿ ಪ್ರದರ್ಶಿಸಲಾಗಿದೆ. ಡಾ.ಚಂದ್ರಶೇಖರ ಕಂಬಾರ ಅವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಸಿದ್ಧಲಿಂಗಯ್ಯನವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು ಎಂದು ಅವರನ್ನು ವಿಶೇಷ ಉಪನ್ಯಾಸದಲ್ಲಿ ಪರಿಚಯಿಸಿದರು.

ವಿಶೇಷ ಉಪನ್ಯಾಸ ಆರಂಭಕ್ಕೂ ಮೊದಲು ನಿಧನರಾದ ಎಸ್. ಬಾಲಚಂದ್ರರಾವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನ ಸಂಗಾತಿ ಮಾಸಿಕ ಪತ್ರಿಕೆಗೆ ಹಾಗೂ ದ್ವಿತೀಯ ಪಿ.ಯು.ಸಿ. ಪಠ್ಯಪುಸ್ತಕಗಳಿಗೆ ವೈಚಾರಿಕ ಮತ್ತು ವೈಜ್ಞಾನಿಕ ಬೆಸುಗೆ ನೀಡಿದ್ದು ಎಸ್. ಬಾಲಚಂದ್ರರಾವ್ ಅವರು ಎಂದು ಸಭೆಯಲ್ಲಿ ಸ್ಮರಿಸಲಾಯಿತು.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರಿಗಾಗಿ ಸಂಗೀತ ಮತ್ತು ನೃತ್ಯ ವಿಭಾಗದ ವಿದ್ಯಾರ್ಥಿಗಳಾದ ಚೌಡಿಬಾಯಿ, ಮಾತಾಜಿ, ಅಕ್ಷತಾ, ಲಕ್ಷ್ಮಿ, ಹರೀಶ್ ಭಂಡಾರಿ ಮೊದಲಾದವರು ಹರನೇ ಕಮ್ಮಾರ ವಿಷ್ಣುವೇ ಬಡಿಗ, ಇವನಾರವ ಇವನಾರವ, ಕೆರೆ ಹಳ್ಳ ಬಾವಿಗಳು ಧರೆಗೆ.... ಮೊದಲಾದ ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ದೊಡ್ಡಬಸಪ್ಪ ಮತ್ತು ಹನುಮಂತಪ್ಪ ತಬಲಾ ಸಾಥ್ ನೀಡಿದರು. ಡಾ.ತಿಮ್ಮಣ್ಣ ಭೀಮರಾಯ್ ಹಾರ್ಮೋನಿಯಂ ನುಡಿಸಿದರು. ಪಿಎಚ್.ಡಿ. ವಿದ್ಯಾರ್ಥಿಗಳಾದ ರಮೇಶ ಎಂ. ಸ್ವಾಗತಿಸಿದರು. ಲಿಂಗರಾಜ ಉಳ್ಳಾಗಡ್ಡಿ ನಿರೂಪಿಸಿದರು. ಸುಮಾ ಕಮ್ಮಾರ ವಂದಿಸಿದರು. ವಿಭಾಗದ ನಿವೃತ್ತ ಹಿರಿಯ ಪ್ರಾಧ್ಯಾಪಕರಾದ ಡಾ.ಕೆ. ರವೀಂದ್ರನಾಥ, ಅಧ್ಯಾಪಕರಾದ ಡಾ.ಯರ್ರಿಸ್ವಾಮಿ, ಮಾಹಿತಿಕೇಂದ್ರದ ಉಪನಿರ್ದೇಶಕರಾದ ಡಾ.ಡಿ. ಮೀನಾಕ್ಷಿ, ಸಿಸ್ಟಂ ಅನಾಲಿಸ್ಟ್ ಶಕುಂತಲ, ಕೃಪಾಶಂಕರ ಹಾಗೂ ಅಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಗೆ ಬರುವ 110/11ಕೆ.ವಿ ಸೋಮಸಮುದ್ರ ವಿದ್ಯುತ್ ಉಪ-ಕೇಂದ್ರದ ನಿರ್ವಹಣೆ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಮೇ 16 ರಂದು ಬೆಳಿಗ್ಗೆ 07 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.



OUR OFFERINGS:
Sales & Distribution – Genuine Toshiba photocopiers and GALTECH Smart panels
Service & Maintenance – Expert technical support and AMC services
Consumables & Accessories – Genuine spare parts
TOSHIBA GALTECH
M:9686663132
SAI MANI ENTERPRISES
Authorized Dealer of Toshiba Photocopiers & GALTECH Sirius interactive flat panel display for Vijayanagara, Bellary and Koppal Districts
# 545/A 6th Ward, Hampi Road, HOSAPETE-583201, Vijayanagara Dist.

# ಪ್ರತಿ ಹಳ್ಳಿಗೂ ರೈಲ್ವೆ ಯೋಜನೆ

## ಸಚಿವ ವಿ. ಸೋಮಣ್ಣ ಹೇಳಿಕೆ | ಕುಷ್ಟಗಿ–ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ

**ಹಂಪಿ ಟೈಮ್ಸ್ ಕೊಪ್ಪಳ**

ರೈಲ್ವೆ ಯೋಜನೆಗಳನ್ನು ಪ್ರತಿ ಹಳ್ಳಿಗೂ ತಲುಪಿ ಸುವ ಚಿಂತನೆ ನಮ್ಮ ಸರ್ಕಾರದ್ದಾಗಿದೆ. ಅದಕ್ಕಾಗಿ ಪ್ರಧಾನ ಮಂತ್ರಿಗಳು ದೇಶದಲ್ಲಿ 7 ಲಕ್ಷ ಕೋಟಿ ರೂ ಹಳೆಯ ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ ಎಂದು ಭಾರತ ಸರ್ಕಾರದ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ. ಸೋಮಣ್ಣ ಹೇಳಿದರು.

ಅವರು ಗುರುವಾರ ಕುಷ್ಟಗಿ ರೈಲು ನಿಲ್ದಾಣದಲ್ಲಿ ನೈಋತ್ಯ ರೈಲ್ವೆ ವಿಭಾಗದ ಗದಗ (ತಳಕಲ್ಲ) ಕುಷ್ಟಗಿ ಹೊಸ ರೈಲು ಮಾರ್ಗದ ಉದ್ಘಾಟನೆ ಹಾಗೂ ರೈಲು ಸಂಖ್ಯೆ. 17323 ಕುಷ್ಟಗಿ–ಎಸ್.ಎಸ್.ಎಸ್. ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು.

ರೈಲ್ವೆ ಸಾರಿಗೆಯಿಂದ ಜನರಿಗೆ ಅನುಕೂಲ ವಾಗಲಿದೆ. ರೈಲು ಒಂದು ಇಂಥ ಇಲಾಖೆ ಇದೆ ಇದರಲ್ಲಿ ಎಲ್ಲರೂ ಓಡಾಡುತ್ತಾರೆ. ದೇವೇಗೌಡರು ಪ್ರಧಾನಿಗಳಾಗಿದ್ದ ಸಮಯದಲ್ಲಿ ಬಸವರಾಜ ರಾಯರೆಡ್ಡಿ ಅವರು ಈ ಭಾಗದ ಸಂಸದರಾಗಿದ್ದ ಸಮಯದಲ್ಲಿ ಗದಗ–ವಾಡಿ ರೈಲು ಮಾರ್ಗದ ಯೋಜನೆ ಕೈಗೆತ್ತಿಕೊಂಡಿದ್ದರು. ಬಹು ದಿನಗಳ ನಂತರ ಈ ಭಾಗದ ಜನರ ಕನಸು ಈಗ ನನಸಾಗಿದೆ ಎಂದರು.

ವಾಜಪೇಯಿ ಅವರು ಪ್ರಧಾನಿಗಳಾಗಿದ್ದ ಸಮಯದಲ್ಲಿ ಅವರು ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಒತ್ತು ನೀಡಿದರೆ ನರೇಂದ್ರ ಮೋದಿಜಿ ಅವರು ರೈಲ್ವೆ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ 45 ಸಾವಿರ ಕೋಟಿ ರೂ ರೈಲ್ವೆ ಯೋಜನೆಯನ್ನು ಕರ್ನಾಟಕದಲ್ಲಿ ಮಾಡುತ್ತಿದ್ದೆವೆ. 2014 ರಿಂದ 2024 ರವರೆಗೆ 5 ಲಕ್ಷ ಉದ್ಯೋಗ ರೈಲ್ವೆ ಇಲಾಖೆಯಲ್ಲಿ ಜನರಿಗೆ ನೀಡಲಾಗಿದೆ. ರೈಲ್ವೆ ಇಲಾಖೆಯಲ್ಲಿ ಕರ್ನಾಟಕದವರಿಗೆ ಉದ್ಯೋಗ ಸಿಗಲು ಅನುಕೂಲವಾಗಲು ಕನ್ನಡದಲ್ಲಿ ಪರೀಕ್ಷೆ ಬರೆಯಲು ಅನುಮತಿ ನೀಡಲಾಗಿದೆ. ಒಂದೇ ಭಾರತ 50 ಎಸಿ ಸ್ಲೀಪರ್ ಕೋಚ್ ಟ್ರೈನಗಳನ್ನು ಇನ್ನೂ ಒಂದುವರೆ ತಿಂಗಳಲ್ಲಿ ದೇಶದಲ್ಲಿ ಬಿಡುಗಡೆ ಮಾಡಲಿದ್ದೆವೆ ಎಂದು ಹೇಳಿದರು.

2025–26ನೇ ಸಾಲಿನಲ್ಲಿ ಗದಗ–ವಾಡಿ ರೈಲು ಯೋಜನೆಗೆ 549.45 ಕೋಟಿ ರೂ ಹಣವನ್ನು ಇರಿಸಿದ್ದೆವೆ. ಗದಗ–ವಾಡಿ ಮಧ್ಯ ಒಟ್ಟು 27 ರೈಲು ನಿಲ್ದಾಣಗಳು ಬರುತ್ತವೆ. ಎಲ್ಲಾ ರೈಲು ನಿಲ್ದಾಣಗಳ ಅಭಿವೃದ್ಧಿಗೆ ನಮ್ಮ ಸರ್ಕಾರದ ಆದ್ಯತೆ ನೀಡಿದೆ. ಇಂದು ಕುಷ್ಟಗಿ–ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಚಾಲನೆ ನೀಡಿದ್ದು, ಪ್ರತಿದಿನ ಕುಷ್ಟಗಿ–ಹುಬ್ಬಳ್ಳಿ ಮಧ್ಯ ಈ ರೈಲು ಸಂಚರಿಸಲಿದೆ. ಟಿಕೆಟ್ ದರ 70 ರೂ ಇದ್ದು. ಬೆಳಿಗ್ಗೆ 7 ಗಂಟೆಗೆ ಕುಷ್ಟಗಿಯಿಂದ ಹೊರಟ ರೈಲು 10.40ಕ್ಕೆ ಹುಬ್ಬಳ್ಳಿ ತಲುಪಲಿದೆ ಮತ್ತೆ ಸಂಜೆ 5 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು ರಾತ್ರಿ 8.30 ಕುಷ್ಟಗಿ ಬಂದು ತಲುಪಲಿದೆ




ಇದರಿಂದ ಈ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್ ತಂಗಡಗಿ ಮಾತನಾಡಿ ಗದಗ–ವಾಡಿ ರೈಲು ಮಾರ್ಗದ ಬಹುದಿನಗಳ ಕನಸು ಈಗ ಇಡೇರಿದೆ. ಬಸವರಾಜ ರಾಯರೆಡ್ಡಿ ಅವರು ಸಂಸದರಾಗಿದ್ದ ಸಮಯದಲ್ಲಿ ಇದನ್ನು ಪ್ರಾರಂಭಿಸಿದರು. ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇ. 50:50 ಪ್ರತಿ ಶತದಲ್ಲಿ ಅನುದಾನವನ್ನು ನೀಡುತ್ತವೆ. ಈ ಯೋಜನೆಗೆ ನಮ್ಮ ಸರ್ಕಾರ ಭೂಮಿ ಒದಗಿಸುವ ಕೆಲಸವನ್ನು ಮಾಡಿದೆ. ಈ ಭಾಗದಿಂದ ಬೆಂಗಳೂರಿಗೆ ಹೋಗುವ ಟ್ರೇನ್ ವ್ಯವಸ್ಥೆ ಆಗಬೇಕು. ದರೋಜಿ–ಬಾಗಲಕೋಟ ಸರ್ವೆ ಆಗಬೇಕು ಇದರಿಂದ ವಾಣಿಜ್ಯೋದ್ಯಮಿಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಅವರು ಮಾತನಾಡಿ, ಗದಗ–ವಾಡಿ ರೈಲ್ವೆ ಮಾರ್ಗ ಸ್ಥಾಪನೆಯು ಬಹು ವರ್ಷಗಳ ಬೇಡಿಕೆಯಾಗಿತ್ತು. ಈ ಮಾರ್ಗದಲ್ಲಿ ಬರುವ ಕುಷ್ಟಗಿ ಪಟ್ಟಣಕ್ಕೆ ಇಂದಿನಿಂದ ರೈಲು ಸಂಚಾರ ಆರಂಭವಾಗಿದ್ದು, ಈ ಭಾಗದ ಅನೇಕ ಹಿರಿಯರು ಕಂಡ ಕನಸು ಇಂದು ನನಸಾಗಿದೆ. ಗದಗ–ವಾಡಿ ರೈಲು ಲೈನ್ ನಿಂದ ನಮ್ಮ ಭಾಗದ ಅಭಿವೃದ್ಧಿಗೆ ತುಂಬಾ ಅನುಕೂಲವಾಗಲಿದೆ. ಸದ್ಯ ಕುಷ್ಟಗಿಯಿಂದ ಹುಬ್ಬಳ್ಳಿವರೆಗೆ ರೈಲು ಸಂಚಾರ ಆರಂಭವಾಗಿದ್ದು, ಮುಂದಿನ ದಿನಮಾನಗಳಲ್ಲಿ ಈ ಮಾರ್ಗದಿಂದ ಲಿಂಕ್ ಲೈನ್ ಮಾಡಿ ಬೆಂಗಳೂರಿಗೂ ಪ್ರಯಾಣಿಸಲು ಅನುಕೂಲ ಮಾಡಿಕೊಡಬೇಕೆಂದು ರೈಲ್ವೆ ಸಚಿವರಲ್ಲಿ ಮನವಿ ಮಾಡಿದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಮಾತನಾಡಿ, ರೈಲ್ವೆ ಮಾರ್ಗಗಳನ್ನು ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಇದಕ್ಕಾಗಿ ಬಹಳ ಪರಿಶ್ರಮಬೇಕು. 1996ರಲ್ಲಿ ನಾನು ಸಂಸದಾನ ಸಂದರ್ಭದಲ್ಲಿ ಮೊದಲನೆ ಬಾರಿಗೆ ಕೊಪ್ಪಳ ದಿಂದ ರಾಯಚೂರು ಮಾರ್ಗವಾಗಿ ಹೈದ್ರಾಬಾದಿಗೆ ರೈಲ್ವೆ ಮಾರ್ಗ ಆಗಬೇಕೆಂದು ಮುನಿರಾಬಾದ್–ಮಹೆಬೂಬ್ ನಗರ ರೈಲ್ವೆ ಮಾರ್ಗವನ್ನು ವಾಯಾ ಗಂಗಾವತಿ, ಸಿಂದನೂರ, ರಾಯಚೂರು ಮೂಲಕ ರೈಲ್ವೆ ಲೈನ್ ಮಾಡಿಸಲು ಪ್ರಯತ್ನಿಸಿದ್ದೆ. ತದನಂತರ 1997ರಲ್ಲಿ ಅಂದಿನ ಪ್ರಧಾನಮಂತ್ರಿಗಳಾದ ಹೆಚ್.ಡಿ.ದೇವೆಗೌಡ ಅವರನ್ನು ಕರೆಸಿ ಈ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಸರ್ವೇ ಮಾಡಿಸಲಾಯಿತು. ಅದೇ ಸಂದರ್ಭದಲ್ಲಿ ಗದಗ–ವಾಡಿ ರೈಲ್ವೆ ಮಾರ್ಗ ಆಗಬೇಕೆಂದು ಒತ್ತಾಯಿಸಲಾಯಿತು. ನಂತರದಲ್ಲಿ ಸರ್ವೆಯನ್ನು ಮಾಡಿಸಲಾಗಿತ್ತು. ಆಗ ಕೆಲವು ತಿಂಗಳುಗಳಲ್ಲಿ ಸಂಸತ್ ವಿಸರ್ಜನೆಗೊಂಡ ಕಾರಣ ಗದಗ–ವಾಡಿ ರೈಲ್ವೆ ಮಾರ್ಗ ವಿಳಂಭವಾಯಿತು ಎಂದರು.

2009 ರಲ್ಲಿ ಸಂಸದರಾಗಿ ಆಯ್ಕೆಯಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರ ಮೂಲಕ ಗದಗ–ವಾಡಿ ರೈಲ್ವೆ ಮಾರ್ಗವನ್ನು ಅಪ್‌ಡೇಟ್ ಮಾಡಲು ಒತ್ತಾಯಿಸಲಾಯಿತು. ನಂತರ 2013–14ರಲ್ಲಿ ಗದಗ–ವಾಡಿ ರೈಲ್ವೆ ಮಾರ್ಗಕ್ಕೆ ಅನುಮೋದನೆ ದೊರೆಯಿತು. ಅಂದೂ ಸಹ ಮುಖ್ಯಮಂತ್ರಿಗಳು ಆಗಿದ್ದ ಸಿದ್ದರಾಮ್ಯನವರು ಈ ಕಾಮಗಾರಿಗೆ ಶೇ. 50ರಷ್ಟು ಹಣವನ್ನು ಮತ್ತು ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ್ದರು. ಈ ಮಾರ್ಗಕ್ಕೆ ಒಟ್ಟು 257 ಕಿ.ಮೀ.ಗೆ 4195 ಎಕರೆ ಜಮೀನು ಬೇಕಿದ್ದು, ಈಗಾಗಲೇ 3867 ಎಕರೆ ಅಂದರೆ, ಶೇ.99ರಷ್ಟು ಭೂಸ್ವಾಧೀನ ಆಗಿದೆ. ನಮ್ಮ ರಾಜ್ಯದಲ್ಲಿ ಇಷ್ಟೊಂದು ತ್ವರಿತವಾಗಿ ಭೂಸ್ವಾಧೀನ ಆಗಿದ್ದು, ಗದಗ–ವಾಡಿ ಯೋಜನೆಯ ಮಾರ್ಗಕ್ಕೆ ಮಾತ್ರ ಆಗಿದೆ. ತಳಕಲ್ ನಿಂದ ಕುಷ್ಟಗಿ ವರೆಗೆ ಸುಮಾರು 56 ಕಿ.ಮೀ ವರೆಗೆ ಕಾಮಗಾರಿಯು ಪೂರ್ಣಗೊಂಡಿದೆ. ವಾಡಿಯಿಂದ ಶಹಪುರ ವರೆಗೆ 48 ರೈಲ್ವೆ ಲೈನ್ ಮುಕ್ತಾಯದ ಹಂತದಲ್ಲಿದೆ. 165 ಕಿ.ಮೀ ಕುಷ್ಟಗಿಯಿಂದ ಸುರಪೂರ ವರೆಗೆ ಕಾಮಗಾರಿಕೆ ಟೆಂಡರ್ ಮಾಡಲಾಗುತ್ತಿದ್ದು, ಇದನ್ನು ಒನ್ ಸಾಟ್ ಟೆಂಡರ್ ಮಾಡಿದರೇ ರಾಜ್ಯ ಸರ್ಕಾರದಿಂದ ಶೇ.50ರಷ್ಟು ಅನುದಾನವನ್ನು ಬಿಡುಗಡೆ ಮಾಡಿಸಲಾಗುವುದು. ಈ ಹಿನ್ನೆಲೆಯಲ್ಲಿ ಒನ್ ಸಾಟ್ ಟೆಂಡರ್ ಮಾಡಿಸಲು ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಈ ಮಾರ್ಗದ ವಿದ್ಯುದ್ದೀಕರಣ ಆಗಬೇಕು. ಗದಗ–ವಾಡಿ ಕಾಮಗಾರಿ ಪೂರ್ಣಗೊಂಡರೆ, ಈ ಭಾಗದ ಜನರ ಪ್ರಯಾಣದ ಜೊತೆಗೆ ವಾಣಿಜ್ಯ ವ್ಯವಹಾರಗಳಿಗೆ ತುಂಬಾ ಅನುಕೂಲವಾಗಲಿದೆ ಎಂದು ಹೇಳಿದರು.

ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಕುಷ್ಟಗಿ ಪುರಸಭೆ ಅಧ್ಯಕ್ಷರಾದ ಮಹಾಂತೇಶ , ಜಿಲ್ಲಾಧಿಕಾರಿ ನಲಿನ್ ಅತುಲ್, ನೈರುತ್ಯ ರೈಲ್ವೆ ಹುಬ್ಬಳ್ಳಿಯ ವಿಭಾಗೀಯ ವ್ಯವಸ್ಥಾಪಕರಾದ ಬೇಲಾ ಮೀನಾ, ಕಾಮಗಾರಿ ನಿರ್ಮಾಣ ವಿಭಾಗದ ಸಿಎಓ ಅಜಯ್ ಶರ್ಮಾ, ಮಾಜಿ ಸಚಿವರಾದ ಅಮರೇಗೌಡ ಪಾಟೀಲ್ ಬಯ್ಯಾಪುರ ಹಾಗೂ ಹಾಲಪ್ಪ ಆಚಾರ್, ಮಾಜಿ ಸಂಸದರಾದ ಕೆ.ವಿರೂಪಾಕ್ಷಪ್ಪ, ಮಾಜಿ ಶಾಸಕರಾದ ಕೆ.ಶರಣಪ್ಪ ಹಾಗೂ ಬವರಾಜ ದಢೇಸೂಗೂರು, ಮುಖಂಡರಾದ ಡಾ. ಕೆ.ಬಸವರಾಜ ಹಾಗೂ ಇತರೆ ಸೇರಿದಂತೆ ರೈಲ್ವೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಷ್ಟಗಿ–ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ: ಕಾರ್ಯಕ್ರಮದ ನಂತರ ರೈಲು ಸಂಖ್ಯೆ. 17323 ಕುಷ್ಟಗಿ–ಎಸ್.ಎಸ್.ಎಸ್. ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಕೇಂದ್ರ ಸರ್ಕಾರದ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಅಧಿಕಾರಿಗಳು ಹಾಗೂ ಇತರೆ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ಬೂದುನೀರು ಕೆರೆ, ನದಿ ಸೇರದಂತೆ ಕ್ರಮ

## ತಾಪಂ ಇಒ ಚಂದ್ರಶೇಖರ್ ವೈ.ಎಚ್. ಅಭಿಮತ | ಡಿಪಿಆರ್ ಕಾರ್ಯಕ್ಕೆ ಚಾಲನೆ

**ಹಂಪಿ ಟೈಮ್ಸ್ ಹರಪನಹಳ್ಳಿ**

ಬೂದು ನೀರು ನಿರ್ವಹಣೆ ಕಾಮಗಾರಿ 2.0 ಹಂತದಲ್ಲಿ ಮತ್ತೆ ಎರಡು ಗ್ರಾಪಂಗಳು ಆಯ್ಕೆಯಾಗಿವೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ವೈ.ಎಚ್. ಹೇಳಿದರು.

ತಾಲೂಕಿನ ಕಂಚಿಕೆರೆ ಗ್ರಾಮ ಪಂಚಾಯಿತಿ ಯಲ್ಲಿ ಜಿಡಬ್ಲ್ಯೂಎಂನ ಡಿಪಿಆರ್ ತಯಾರಿಸಲು ಸರ್ವೇ ಕಾರ್ಯಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು. ಮೊದಲ ಹಂತದಲ್ಲಿ ಚಿಗಟೇರಿ ಹಾಗೂ ಹಲುವಾಗಲು ಗ್ರಾಮವನ್ನು ಆಯ್ಕೆ ಮಾಡಲಾಗಿತ್ತು. ಈಗಾಗಲೇ ಆ ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ. ಈಗ ಎರಡನೇ ಹಂತದಲ್ಲಿ 2025–26 ನೇ ಸಾಲಿನಲ್ಲಿ ಗುಂಡಗತ್ತಿ ಹಾಗೂ ಕಂಚಿಕೆರೆ ಗ್ರಾಮವನ್ನು ಆಯ್ಕೆ ಮಾಡಿದ್ದು, ಪ್ರಾರಂಭದಲ್ಲಿ ಇಡೀ ಗ್ರಾಮದ ಮಾಹಿತಿ ಸಂಗ್ರಹಿಸಿ ಡಿಪಿಆರ್ ತಯಾರಿಕೆಗೆ ಮನೆ ಮನೆ ಸರ್ವೇ ಹಾಗೂ ಇಡೀ ಗ್ರಾಮದ ಸುತ್ತಲೂ ಇರುವ ಚರಂಡಿಗಳಿಂದ ಹರಿಯುವ ಬೂದು ನೀರನ್ನು ಹೊರಗಡೆ ಕಳಹಿಸುವಾಗ ಸ್ವಚ್ಚಗೊಳಿಸಿ ಕೆರೆ, ನದಿ ಸೇರಿದಂತೆ ಇತರೆ ಜಲ ಸಂಗ್ರಹಣಾ ಸ್ಥಳಗಳಿಗೆ ಹರಿಯಲು ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಮನರೇಗಾ ಯೋಜನೆಯಡಿ ಜಿಡಬ್ಲ್ಯೂ ಎಂ ಕಾಮಗಾರಿಗಳಿಗೆ ಆಯ್ಕೆಯಾದ ಗ್ರಾಮದಲ್ಲಿ ಬೂದು



ನೀರು ನಿರ್ವಹಣೆ ಘಟಕ ಕಾಮಗಾರಿ ನಡೆಯಲಿವೆ. ಬೂದು ನೀರು ಉತ್ಪಾದನೆಯಾಗುವ ಮನೆಗಳಿಂದ ಜಲಮೂಲ ಸೇರುವವರೆಗೆ ಸಿಸಿ ಚರಂಡಿ, ಸೆಟ್ಲರ್ ಟ್ಯಾಂಕ್, ವೆಟ್ ಲ್ಯಾಂಡ್, ಬಚ್ಚಲು ಗುಂಡಿ, ಸಮುದಾಯ ಇಂಗುಗುಂಡಿ ಸೇರಿ ಇತರೆ ಘಟಕಗಳನ್ನು ನಿರ್ಮಿಸ ಲಾಗುತ್ತದೆ. ದ್ರವ ತ್ಯಾಜ್ಯವನ್ನು ವೈಜ್ಞಾನಿಕ ಮತ್ತು ತಾಂತ್ರಿಕ ಮಾದರಿಯಲ್ಲಿ ಸಂಸ್ಕರಿಸಲು ಕಾಮಗಾರಿ ಅಭಿವೃದ್ಧಿಪಡಿಸ ಲಾಗುವುದು. ಇದರಿಂದ ಗ್ರಾಮ ಗಳು ನೈರ್ಮಲ್ಯಗೊಂಡು ರೋಗಗಳು ಸಹ ದೂರವಾಗಲಿವೆ ಎಂದರು.


ನರೇಗಾ ಸಹಾಯಕ ನಿರ್ದೇಶಕರಾದ ಸೋಮ ಶೇಖರ್ ಯು.ಎಚ್. ಮಾತನಾಡಿ, ಗ್ರಾಮೀಣ ಭಾಗದಲ್ಲಿ ಉತ್ತಮ ಆರೋಗ್ಯ, ಉತ್ತಮ ಪರಿಸರ ಹಾಗೂ ಉತ್ತಮ ಸಮಾಜ ನಿರ್ಮಾಣ ಮಾಡುವ ಉದ್ದೇಶದಿಂದ ಸರ್ಕಾರ ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಹಿಂದೆ ಜನರು ಬಚ್ಚಲು ನೀರು, ಬಟ್ಟೆಗಳನ್ನು ತೊಳೆದ ನೀರು ಹಾಗೂ ಪಾತ್ರೆಗಳನ್ನು ತೊಳೆದ ನೀರನ್ನು ಚರಂಡಿಗಳಿಗೆ ಬಿಡುತ್ತಿದ್ದರು. ಇದರಿಂದ ಚರಂಡಿಗಳು ತುಂಬಿ ರೋಗಗಳ ತಾಣವಾಗುತ್ತಿತ್ತು. ನಂತರ ಬೂದು ನೀರು ನದಿಯನ್ನು ಸೇರಿ ನದಿ ನೀರಿನ ಮಾಲಿನ್ಯಕ್ಕೆ ಕಾರಣವಾಗುತ್ತಿತ್ತು. ಮನರೇಗಾದಡಿ ಯಲ್ಲಿ ನೈರ್ಮಲ್ಯ ಕಾಪಾಡುವ ಹಾಗೂ ಜನರ ಜೀವನ ಮಟ್ಟ ಸುಧಾರಿಸುವ ಉದ್ದೇಶದಿಂದ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಮಾಡಲಾಗುತ್ತಿದೆ. ಬೂದು ನೀರು ಎಲ್ಲೆಂದರಲ್ಲಿ ನಿಂತು ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆದು ನೀರಿನ ವೈಜ್ಞಾನಿಕ ನಿರ್ವಹಣೆ ಮಾಡುವ ಉದ್ದೇಶದಿಂದ ಬೂದು ನೀರು ನಿರ್ವಹಣಾ ಘಟಕಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕಂಚಿಕೆರೆ ಗ್ರಾಪಂ ಅಧ್ಯಕ್ಷೆ ನೀಲಮ್ಮ, ದಿಶಾ ಕಮಿಟಿಯ ಸದಸ್ಯರಾದ ರೆಡ್ಡಿ ಶಾಂತಕುಮಾರ್, ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ಐಇಸಿ ಸಂಯೋಜಕ ಕೆ.ವಸಿಗೇರಪ್ಪ ಚಾಗನೂರು, ಪಿಡಿಒ ದುರುಗಪ್ಪ, ಎಡಿಎಎ ಶ್ರೀನಿವಾಸ, ತಾಂತ್ರಿಕ ಸಹಾಯಕ ಅಭಿಯಂತರರು, ಗ್ರಾಪಂ ಸದಸ್ಯರು, ಬಿಎಫ್ ಟಿಗಳು, ಗ್ರಾಮ ಕಾಯಕ ಮಿತ್ರರು, ತಾಂಡಾ ರೋಜ್ಗಾರ್ ಮಿತ್ರರು, ಸ್ವಸಹಾಯ ಸಂಘದ ಮಹಿಳೆಯರು ಹಾಗೂ ಇತರರಿದ್ದರು.

> ಮನರೇಗಾದಡಿ ಗ್ರಾಮಗಳ ಅಭಿವೃದ್ಧಿಗೆ ಸಾಕಷ್ಟು ಕಾಮಗಾರಿ ಗಳನ್ನು ತೆಗೆದು ಕೊಳ್ಳಬಹುದು. ಅದರಲ್ಲಿ ಬೂದು ನೀರು ನಿರ್ವಹಣೆ ಕಾಮಗಾರಿ ಒಂದಾಗಿದೆ. ಈ ಪ್ರಾಜೆಕ್ಟ್‌ಲ್ಲಿ ಸಮುದಾಯ ಹಾಗೂ ವೈಯಕ್ತಿಕ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲಾಗುತ್ತಿದೆ.
> – ಚಂದ್ರಶೇಖರ್ ವೈ.ಎಚ್
> ಇ.ಒ., ತಾ.ಪಂ., ಹರಪನಹಳ್ಳಿ



ಹರಪನಹಳ್ಳಿ ತಾಲೂಕಿನ ಕಂಚಿಕೆರೆ ಗ್ರಾಮ ಪಂಚಾಯಿತಿಯಲ್ಲಿ ಜಿಡಬ್ಲ್ಯೂಎಂನ ಡಿಪಿಆರ್ ತಯಾರಿಸಲು ಸರ್ವೇ ಕಾರ್ಯಕ್ಕೆ ಹರಪನಹಳ್ಳಿ ತಾಪಂ ಇಒ ಚಂದ್ರಶೇಖರ ವೈ.ಎಚ್. ಗುರುವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನರೇಗಾ ಸಹಾಯಕ ನಿರ್ದೇಶಕರಾದ ಸೋಮಶೇಖರ್ ಯು.ಎಚ್., ದಿಶಾ ಕಮಿಟಿ ಸದಸ್ಯರಾದ ರೆಡ್ಡಿ ಶಾಂತಕುಮಾರ, ಕಂಚಿಕೆರೆ ಗ್ರಾಪಂ ಅಧ್ಯಕ್ಷೆ ನೀಲಮ್ಮ, ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ಐಇಸಿ ಸಂಯೋಜಕ ಕೆ.ವಸಿಗೇರಪ್ಪ ಚಾಗನೂರು, ಪಿಡಿಒ ದುರುಗಪ್ಪ, ಎಡಿಎಎ ಶ್ರೀನಿವಾಸ ಇತರರಿದ್ದರು.



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 15–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.35 ಅಡಿ |
| ಒಳ ಹರಿವು | 1160 ಕ್ಯುಸೆಕ್ |
| ಹೊರ ಹರಿವು | 380 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.243 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.59 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.412 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ | ಸಂವತ್ಸರ: ವಿಶ್ವಾವಸು

16–05–2025 – ಶುಕ್ರವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೂಲ |
| ಯೋಗ | : ಸಿದ್ಧಿ |
| ಕರಣ | : ಭವ |
| ಸೂರ್ಯೋದಯ | : 05:46:36 |
| ಸೂರ್ಯಾಸ್ತ | : 19:00:17 |
| ರಾಹು ಕಾಲ | : 10:44–12:23 |
| ಯಮಘಂಡ ಕಾಲ | : 15:42–17:21 |
| ಗುಳಿಕ ಕಾಲ | : 07:26–09:05 |

## ಮೈಕ್ರೋ ನ್ಯೂಸ್

### ರೈಲು ಪುನರಾರಂಭಿಸಿ

**ಮೊದಲ ಪುಟದಿಂದ**

ಪುನರ್ ಆರಂಭಿಸಬೇಕು.

**ಹುಬ್ಬಳ್ಳಿ–ಚೆನ್ನೈ ಪ್ರತಿದಿನ ಸಂಚರಿಸಲಿ:** ವಾರಕ್ಕೆ ಎರಡು ಬಾರಿ ಸಂಚರಿಸುತ್ತಿರುವ ಗಾಡಿ ಸಂಖ್ಯೆ : 17313/17314 ಹುಬ್ಬಳ್ಳಿ ಚೆನ್ನೈ ರೈಲನ್ನು ಪ್ರತಿದಿನ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು. ಅದರಂತೆ 16217/16218 ಮೈಸೂರು –ಶಿರಡಿ– ಮೈಸೂರು ರೈಲನ್ನು ವಾರಕ್ಕೆ ಮೂರು ಬಾರಿ ಸಂಚರಿಸಲು ಕ್ರಮ ಕೈಗೊಳ್ಳಬೇಕು. ಹೊಸಪೇಟೆ ರೈಲ್ವೇ ನಿಲ್ದಾಣ ಮೇಲ್ದರ್ಜೆಗೇರಿಸಿ ಎರಡು ನೂತನ ಪ್ಲಾಟ್ ಫಾರಂ ನಿರ್ಮಾಣ ಮಾಡಬೇಕು. 11139/11140 ಹೊಸಪೇಟೆ–ಮುಂಬೈ ರೈಲಿನ ಹಳೇ ಕೋಚ್‌ಗಳ ಬದಲಾಗಿ ಅತ್ಯಾಧುನಿಕ ಎಲ್.ಹೆಚ್.ಬಿ. ಕೋಚ್‌ಗಳನ್ನು ಅಳವಡಿಸಬೇಕು. ಹೊಸಪೇಟೆ ನಗರದ ಐ.ಎಸ್.ಆರ್. ಕಾರ್ಖಾನೆ ಬಳಿ ಎಲ್.ಸಿ.ಗೇಟ್ ನಂ : 4 ಕ್ಕೆ ರೈಲು ಮೇಲ್ಸೇತುವೆ ಅಥವಾ ಕೆಳಸೇತುವೆ ನಿರ್ಮಾಣಕ್ಕೆ ಕೂಡಲೇ ಕೈಗೊಳ್ಳುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಬಾಬುಲಾಲ್ ಜೈನ್, ಸಂಘದ ಅಧ್ಯಕ್ಷ ವೈ. ಯಮುನೇಶ್, ಕಾರ್ಯದರ್ಶಿ ಮಹೇಶ್ ಕುಡುತಿನಿ, ಉಮಾಮಹೇಶ್ವರ್, ಯು. ಆಂಜನೇಯಲು, ಎಂ.ರಂಗನಾಥ, ಅರವಿಂದ ಜಾಲಿ, ರಾಮನಮಲಿ, ಶಾಂತಪ್ಪ, ಎಂ. ರಾಜಶೇಖರ್, ಜಗದೀಶ್, ನಜೀರ್ ಸಾಬ್, ಜೆ.ವರುಣ್, ದೀಪಕ್ ಉಳ್ಳಿ, ಟಿ.ಎಂ.ತಿಪ್ಪೇಸ್ವಾಮಿ, ಶಿವಕುಮಾರ್, ಇತರರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!